HAVYAKA SANDESHA

ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXV No. 02 | May 2017 | Pages 16 | **Rs. 2/-**



FORTHCOMING EVENT

Karki Venkataraman Shastri Suri Award Presenting Ceremony on 18-6-2017, Sunday, 10 a.m. onwards at Havyakara Sabhagraha, Ghatkopar (W), Mumbai.

PAGE DONATED BY : ***M/S. METALLURGICAL SERVICES,*** *COURTESY :* ***SHRI RAMESH G. HEGDE,*** *MADAPPAN, KARKI, DADAR T. T.*

"**Havyaka Sandesha**" is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

Hon. Editor : Smt. Amita S. Bhagwat

Editorial Committee : Smt. Shashikala Hegde, Smt. Tanuja Hegde, Shri Gautam Upadhya, Smt. Uma Swamy

Publisher : Narayan Akadas R. Hon. Gen. Secretary

Printed at : M/s. Navin Printers Mumbai - 400 016. ✆ 2430 8316

Havyaka Welfare Trust (Estd. 1964) : is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

Membership of Havyaka Welfare Trust :
Patron (PT) Rs. 5010/-, Benefactor (BN) Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

Havyaka Sandesha Advertisement Tariff :
¼ Page Rs. 5000/- annum Rs. 500/- one time.
½ Page Rs. 10,000/- annum Rs. 1,000/- one time
Full Page Rs.15,000/- annum Rs. 2,000/- one time
Matrimonial Rs. 500/- per Issue

Publication : Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

Change of Address : Members are requested to intimate the office in writing or through e-mail with their Membership No.

Managing Committee for the year 2016-2017

President	: Shivkumar P. Bhagwat
Vice - President	: Sanjay Bhat
Hon. Gen. Secretary	: Narayan Akadas
Hon. Jt. Secretary	: Umesh Hegde
Hon. Treasurer	: A. G. Bhat

Elected Members :

Smt. Tanuja Hegde	A. K. Bhat
Smt. Shashikala Hegde	R. N. Kameshwar
Gautam Upadhya	Smt. Uma Swamy
Keshav Hegde	Chidanand Bhagwat
R. M. Shastri	

ಸಂಪಾದಕೀಯ

ಸಂಭವಾಮಿ ಯುಗೇ ಯುಗೇ

ಬಣ್ಣ ಬಣ್ಣದ ಜರಿತಾರಿ ಸೀರೆಗಳನ್ನುಟ್ಟು, ಆಭರಣಗಳನ್ನು ಧರಿಸಿ ಶೃಂಗರಿಸಿಕೊಂಡ ಹೆಂಗಳೆಯರ ಲಗುಬಗೆಯ ಓಡಾಟ, ಬಹಳ ಕಾಲದ ನಂತರ ಭೇಟಿಯಾದ ಗೆಳೆಯರ, ಸಂಬಂಧಿಕರ ನಡುವೆ ಅಬ್ಬರದ ಮಾತುಕತೆ, ನಗುವಿನ ಹೊನಲು, ಓಲಗದವರ ವಾದ್ಯಗಳ ಸದ್ದು, ಪುರೋಹಿತರ ಮಂತ್ರಘೋಷಣೆ ಇವೆಲ್ಲಾ ಮದುವೆಯ ಮನೆಯ ನೆನಪನ್ನು ತರುತ್ತದೆಯಲ್ಲವೇ? ಹೌದು, ಬೇಸಿಗೆ ಬಂತೆಂದರೆ ಮದುವೆ ಹಾಗೂ ಹಲವಾರು ಸಮಾರಂಭಗಳ ಸಡಗರ, ಸಂಭ್ರಮ! ಇತ್ತೀಚಿನ ದಿನಗಳಲ್ಲಿ ವರ್ಷದ ಎಲ್ಲಾ ಕಾಲಗಳಲ್ಲೂ ಮದುವೆಗಳು ನಡೆಯುತ್ತಿದ್ದರೂ ಕೂಡ ಬೇಸಿಗೆಯಲ್ಲಿ ನಡೆಯುವ ಮದುವೆಯ ಸಂಭ್ರಮವೇ ಬೇರೆ. ಪರೀಕ್ಷೆಗಳನ್ನು ಮುಗಿಸಿ ರಜೆಯ ಮೋಜಿನಲ್ಲಿರುವ ಮಕ್ಕಳು, ಮಕ್ಕಳಿಗಿಂತ ಹೆಚ್ಚಿನ ನೆಮ್ಮದಿಯಿಂದಿರುವ ಅವರ ತಾಯಂದಿರು, ಸಹ ಕುಟುಂಬದೊಡನೆ ಖುಷಿಯಿಂದ ಬರುವ ಪುರುಷರು ಹೀಗೆ ಎಲ್ಲರ ಮುಖದ ಮೇಲೂ ಸೆಖೆಯ ವಾತಾವರಣದಲ್ಲೂ ದೂರದಲ್ಲೆಲ್ಲೋ ಚಲಿಸುತ್ತಿರುವ ಫ್ಯಾನಿನ ಗಾಳಿಯೊಮ್ಮೆ ಮೈಗೆ ತಾಗಿ ಹಾಯೆನಿಸುವ ತಂಪಾದ ಅನುಭವ. ಪುರೋಹಿತರ 'ಸುಲಗ್ನೇ ಸಾವಧಾನ, ಸುಮುಹೂರ್ತೇ ಸಾವಧಾನ' ಎಂಬ ಮಂತ್ರದೊಂದಿಗೆ ವಿವಾಹ ಸಂಪನ್ನಗೊಂಡ ಸಂತಸ.

ನಮ್ಮ ದೇಶದಲ್ಲಿ ಬಹುತೇಕ ಎಲ್ಲ ಸಂದರ್ಭಗಳಲ್ಲೂ ಅಂದರೆ ಮಗುವಿನ ನಾಮಕರಣದಿಂದ ಹಿಡಿದು ಅನ್ನಪ್ರಾಶನ, ಅಕ್ಷರಾಭ್ಯಾಸದ ಪ್ರಾರಂಭ ಹೀಗೆ ಜೀವನದ ಎಲ್ಲಾ ಪ್ರಮುಖ ಹಂತಗಳನ್ನೂ ಸುದಿನ, ಸುಮುಹೂರ್ತಗಳನ್ನು ನೋಡಿಯೇ ಆಚರಿಸುವುದು ವಾಡಿಕೆ. ತಮ್ಮ ಮಕ್ಕಳು ಎಲ್ಲರಂತೆ ಅಥವಾ ಎಲ್ಲರಿಗಿಂತ ಬುದ್ಧಿವಂತರಾಗಬೇಕು, ಉತ್ತಮ ನಾಗರಿಕರಾಗಬೇಕು ಎನ್ನುವುದೇ ಎಲ್ಲಾ ತಾಯ್ತಂದೆಯರ ಆಶಯ, ಹಾರೈಕೆ. ಆದರೂ ದಿನದಿಂದ ದಿನಕ್ಕೆ ದೇಶದಲ್ಲಿ ಹೆಚ್ಚುತ್ತಿರುವ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ, ಆತಂಕವಾದಿಗಳ ದಾಳಿ ಇವುಗಳನ್ನು ನೋಡಿದರೆ ಎಲ್ಲೋ ಏನೋ ತಪ್ಪಾಗುತ್ತಿದೆ ಎನ್ನುವ ಆತಂಕ. ಇದಕ್ಕೇನು ಕಾರಣ- ಮಕ್ಕಳನ್ನು ಪೋಷಿಸುವುದರಲ್ಲಿ, ಅವರನ್ನು ಬೆಳೆಸುವುದರಲ್ಲಿ ಏನಾದರೂ ಕೊರತೆಯೇ? ಆಧುನಿಕ ತಂತ್ರಜ್ಞಾನಗಳ ದುರ್ಬಳಕೆಯೇ? ಹೊರಜಗತ್ತಿನ ಪ್ರಭಾವವೇ ಎಂದು ಕಾಡುವ ಹತ್ತು ಹಲವಾರು ಭೂತಾಕಾರದ ಪ್ರಶ್ನೆಗಳು.

ಶ್ರೀರಾಮ, ಶ್ರೀಕೃಷ್ಣರಂತಹ ಪುರುಷೋತ್ತಮರು ಬಾಳಿ ಹೋದಂತಹ ಪುಣ್ಯಭೂಮಿಯಲ್ಲಿಂದು ಏಕೆ ಹಿಂಸೆ ಎಂಬ ಕರಾಳ ಛಾಯೆ ತಾಂಡವವಾಡುತ್ತಿದೆ? ಇದಕ್ಕೆ ಪರಿಹಾರವಿಲ್ಲವೇ? ಎನ್ನುವ ಪ್ರಶ್ನಾರ್ಥಕ ಚಿಹ್ನೆ ಎಲ್ಲರ ಮನದಲ್ಲಿ. ಹಿಂದಿನ ಕಾಲದಂತೆ ಗುರುಕುಲ ಪದ್ಧತಿ, ವೇದಾಧ್ಯಯನ ಸಾಧ್ಯವಿಲ್ಲವಾದರೂ ಆಧುನಿಕ ವ್ಯಾಸಂಗದಲ್ಲಿ ಇತ್ತೀಚೆಗೆ ಮರೆಯಾಗುತ್ತಿರುವ ಪುರಾಣಕಥೆಗಳ, ಹಿಂದೆ ಬಾಳಿ ಹೋದ ಆದರ್ಶ ಪುರುಷರ ಉದಾತ್ತ ಗುಣಗಳ ಅಧ್ಯಯನಗಳ ಅಳವಡಿಕೆ ಮಕ್ಕಳ ಮನಸ್ಸಿನಲ್ಲಿ ಸಕಾರಾತ್ಮಕ ಗುಣಗಳು ಮೊಳಕೆಯೊಡೆದು ಬೆಳೆಯುವುದರಲ್ಲಿ ಉಪಯುಕ್ತವಾಗಬಹುದೇನೋ?

ಒಂದೆಡೆ ಹಿಂಸೆ, ಅತ್ಯಾಚಾರಗಳು ನಡೆಯುತ್ತಿದ್ದರೆ ಇನ್ನೊಂದೆಡೆ ಅದಕ್ಕೆ ವಿಪರ್ಯಾಸವಾಗಿ ಮಂದಿರ, ಧಾರ್ಮಿಕ ಕ್ಷೇತ್ರಗಳಲ್ಲಿ ಭಗವಂತನ ನಾಮಸ್ಮರಣೆ, ಭಜನೆಗಳು ಕೇಳಿಬರುತ್ತವೆ. ಇಂದಿನ ಯಾಂತ್ರಿಕ ಬದುಕಿನಲ್ಲೂ ಜನರು ತಮ್ಮ ಬಿಡುವಿಲ್ಲದ ದೈನಂದಿನ ಕೆಲಸದ ಮಧ್ಯದಲ್ಲೂ ದೇವರ ದರ್ಶನ ಪಡೆಯಲು ಶಾಂತರೀತಿಯಿಂದ ಸರದಿಯಲ್ಲಿ ನಿಂತು ಕಾಯುವ ದೃಶ್ಯ ಸಾಮಾನ್ಯ. ಭಗವಂತನ ಕೀರ್ತನೆ, ನೆರೆದ ಭಕ್ತರ ಜೈಕಾರ, ಮೆದುವಾಗಿ ಹರಿದು ಬರುವ ದೇವರ ಸ್ತುತಿ, ನೂರಾರು, ಸಾವಿರಾರು ಭಕ್ತರು ಸೇರಿದರೂ ಕೂಡ ಎಲ್ಲಾ ದ್ವೇಷ, ಅಸೂಯೆಗಳನ್ನು ಮರೆಸುವಂತಹ ಪ್ರಸನ್ನತೆಯ, ಶಾಂತ, ಭಕ್ತಿಮಯ ವಾತಾವರಣ!

ಅಪರಾಧಿಗಳನ್ನು ಕಾರಾಗೃಹದ ಕತ್ತಲ ಕೋಣೆಯಲ್ಲಿ ಬಂಧಿಸಿ ಇಡುವುದರ ಬದಲಾಗಿ ಅವರನ್ನೆಲ್ಲಾ ಇಂತಹ ಧಾರ್ಮಿಕ ಕ್ಷೇತ್ರಗಳಲ್ಲಿ ನೆಲೆಸುವಂತಹ ಶಿಕ್ಷೆ ನೀಡಿದರೆ ಅವರ ಮನದಲ್ಲಿರುವ ದ್ವೇಷ ದಳ್ಳುರಿಗಳೆಲ್ಲವೂ ಇಂತಹ ಪ್ರಶಾಂತ ವಾತಾವರಣದಲ್ಲಿ ಖಂಡಿತವಾಗಿ ಶಮನ ಹೊಂದಿ ಅವರು ಒಳ್ಳೆಯ ನಾಗರಿಕರಾಗಲು ಸಹಾಯವಾಗಬಹುದೆನ್ನುವ ಭಾವನೆ ಜನಸಾಮಾನ್ಯರ ಮನದಲ್ಲಿ ಮೂಡಿದರೆ ಆಶ್ಚರ್ಯವೇನಲ್ಲ! ಎಲ್ಲಕ್ಕಿಂತ ಮಿಗಿಲಾಗಿ 'ಸಂಭವಾಮಿ ಯುಗೇ ಯುಗೇ' ಎಂದ ಭಗವಂತನು ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಲು ಅವತಾರವನ್ನೆತ್ತಿ ಬಂದು ಎಲ್ಲ ಕಡೆ ಶಾಂತಿ, ಸುಕ್ಷೇಮಗಳು ನೆಲೆಸುವಂತಾಗಲಿ ಎಂಬ ಆಶಯದೊಂದಿಗೆ...

– ಶಶಿಕಲಾ ಹೆಗಡೆ

ಸಂಪಾದಕರು : ಶಶಿಕಲಾ ಎಸ್ ಭಾಗವತ್

HAVYAKA YOUTH WING

"We travel not to escape life, but for life not to escape us." - Anonymous

Sikkim a small north eastern Indian state with a captivating natural charm and the beauty enhanced by mountain Kanchenjunga is just as the locals call it, a 'paradise'. Sikkim word is derived from 'Su' meaning 'new' and 'khyim' meaning 'palace'.

Though the travel to Sikkim is an unpredictable one, as most of the places of the Himalayan ranges, but the journey is in itself a breath-taking and mesmerizing one. March being winter-end or Spring in Sikkim is one of the most unforeseeable one as I can conclude from my trip. We experienced one of the coldest days of Winter, rainfall and also snowfall! With the cutest little kids and lovely looking people, with Eyeliner and Lipstick a staple for ladies like momos & maggi for cuisine, it was great meeting the sweet locals.

The nearest airport being Bagdogra in West Bengal, we started from there to Gangtok, immediately after arriving in the afternoon. A 4.30 hrs drive with views ranging from the littered roads to the beautiful mountains and soothing Teesta river; from warm Bagdogra, we reached to the chilling Gangtok. Because of the heavy rains starting from the next day, we couldn't get permit for Nathula pass and Changu Lake for the next three days also! Like all of the other tourists, we had to cancel out one important place from our itinerary. But nevermind, we received much more than we lost! We went for local sightseeing around the city, to Hanuman Tok (constructed and maintained wholly by army!), Ganesh Tok, Banjhakri falls and a Handicraft exhibition. The rainy day couldn't stop us from enjoying! Next day was a bright one (after all the damages it did the previous day of blocking roads to Changu) we headed to south Sikkim. Not known by many people, it has the Replica of Chardham which is indeed a very very amazing one with a divine statue of Lord Shiva and Nandi and most of the Chardham yatra temples all at one place! A must visit; important to mention since most of them skip this place (so did we, but god had different plans for us though! ;p). After returning, we strolled around the streets of the famous MG market tasting the local dishes.

We started for Lachung the next day which was partly covered by snow when we reached. And all thanks to the Mumbai weather which makes us intolerant to low temperatures, we shivered throughout our stay, because as we reached, it started raining , and to make matters worse, it snowed at night. Mind you, no electricity, so no heaters for most of the time! After the long night passed, all our struggles and complaints seemed to settle when we witnessed one of the most beautiful scenes we had ever seen! Snow-capped mountains, milky white lands snow laden trees, and bare ground hardly visible under the snow layers. The bright scenery pumped us with all new energy and indelible memories.

What happened next? Wait for it in the next edition!

Have any travel article share? Feel free to share it with us on Facebook, or email it to us and we shall upload your story! Find us on Facebook: www.facebook.com havyakayouthwingmumbai/

Contact : **Yashashree Akadas**
yashashree.akadas@yahoo.in, Gautam Upadhyay: 9833325265, Chidanand Bhagwat: 9819285372

ANNOUNCEMENT

The following physiotherapy treatment has already started in Dombivli medical centre. Needy persons can take benefit of this service in concessional rates.

1) Ultra Sound (US)
2) Short Wave Diathermy (CWD)
3) Cervical Traction
4) Transacutenious Nerve Stimulator (TNS)
5) IFT
6) Exercise

Attending Doctor -
Dr. Sayali Patwardhan (PT) BPTH (Mum)
Timing : **Mon - Sat 6 p.m. to 7.30 p.m.**

Contact :
Mrs. Jaya Bhat - 9987977330
Mrs. Sumitra Bhat - 9167574282
Havyaka Medical Centre Dombivli Unit.
B-04, Om Trimurti C.H.S. Ltd., Ambika Nagar, M. G. Road, Dombivli (W) - 421 202 • Phone : 0251-248 7291

PAGE DONATED BY : ***HEGDE HOSPITAL,*** *CHEMBUR, COURTESY :* ***DR. DINESH HEGDE***

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬೈ

HAVYAKA WELFARE TRUST, MUMBAI

'ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ' ಪ್ರಶಸ್ತಿ ಪ್ರದಾನ ಸಮಾರಂಭ – 2017

"Karki Venkataramana Shastri Suri" Award Presentation Ceremony - 2017

DATE : 18-6-2017, Sunday • TIME : 10.00 a.m. onwards

Venue : Havyakara Sabhagraha, Dipti Solitaire, 4th Floor, M. G. Road & L.B.S. Marg Junction, Opp. Post Office, Ghatkopar (W), Mumbai - 400 086.

ಸಹಕಾರ / **Co-operation**	ಕರ್ನಾಟಕ ಮಲ್ಲ, ಕನ್ನಡ ದೈನಿಕ, ಮುಂಬೈ **Karnataka Malla, Kannada Daily News Paper, Mumbai**
ಪ್ರಶಸ್ತಿ ಪಾತ್ರರು / **Awardee**	ಶ್ರೀ ಎಲ್. ಎಸ್. ಶಾಸ್ತ್ರಿ (ಖ್ಯಾತ ಪತ್ರಿಕೋದ್ಯಮಿ) **Shri L. S. SHASTRI (Eminent Journalist)**
ಮುಖ್ಯ ಅತಿಥಿಗಳು / **Chief Guest**	ಡಾ. ತಾಳ್ತಜೆ ವಸಂತಕುಮಾರ್ (ನಿವೃತ್ತ ಮುಖ್ಯಸ್ಥರು ಕನ್ನಡ ವಿಭಾಗ ಮುಂಬಯಿ ವಿ. ವಿ.) **Dr. TALTAJE VASANTKUMAR** **(Retired Head Kannada Department Mumbai University)**
ಗೌರವ ಅತಿಥಿಗಳು / **Guests of Honour**	ಶ್ರೀ ಚಂದ್ರಶೇಖರ ಪಾಲೆತ್ತಾಡಿ (ಸಂಪಾದಕರು, ಕರ್ನಾಟಕ ಮಲ್ಲ) **Shri CHANDRASHEKHAR PALETTADI (Editor, Karnataka Malla)** ಶ್ರೀ ಶಿಮುಂಜೆ ಪರಾರಿ (ಸಾಹಿತಿ, ನಾಟಕಕಾರರು) **Shri SHIMUNJE PARARI (Eminent Writer, Dramatist)**
ಅಧ್ಯಕ್ಷತೆ / **Chairperson**	ಶ್ರೀ ಶಿವಕುಮಾರ್ ಭಾಗವತ್ (ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್) **Shri SHIVKUMAR BHAGWAT (President, Havyaka Welfare Tust)**

ಕಾರ್ಯಕ್ರಮಗಳ ವಿವರ / Programme Details

ಪ್ರಶಸ್ತಿ ಪ್ರದಾನ ಸಮಾರಂಭ ಬೆಳಿಗ್ಗೆ 10.00 ರಿಂದ 1.00 / **Award presentation : 10.00 a.m. to 1.00 p.m.**

ಭೋಜನ ವಿರಾಮ : 1.00 ರಿಂದ 2.00 / **Lunch Break : 1.00 p.m. to 2.00 p.m.**

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು / **Cultural Programme**

'ವಿವಿಧ ವಿನೋದಾವಳಿ' ಜೆ. ಜಿ. ಕ್ರಿಯೇಶನ್ಸ್ (ಬಾಳೇಸರ ವಿನಾಯಕ ಮತ್ತು ತಂಡ) ಇವರಿಂದ

Variety Entertainment Programme by J. G. Creations (Balesar Vinayak & Group)

2.00 p.m. to 5.00 p.m.

ತಾವೆಲ್ಲರೂ ಬಂಧು-ಮಿತ್ರರೊಂದಿಗೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಶಿವಕುಮಾರ ಭಾಗ್ವತ್	ಎನ್. ಆರ್. ಅಕದಾಸ	ತನುಜಾ ಹೆಗಡೆ, ಕೇಶವ ಹೆಗಡೆ
(ಅಧ್ಯಕ್ಷರು)	(ಗೌ। ಕಾರ್ಯದರ್ಶಿ)	(ಸಂಚಾಲಕರು, ಕೆ.ವಿ.ಎಸ್.ಎಸ್.)

ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ

VEDIC WAY

✍ **Uday Koppikar**

Susvagatam! Hearty Welcome!

If we look around us today, the earlier system of joint families is crumbling fast with nuclear families abounding. This is an alien import. The driving force behind this change is purely commercial gain regardless of the cost to Society. In fact, even among cultures where such nuclear families are the norm, we observe that the very family concept has undergone a tremendous change. Singletons, one-parent families, irregular unions and all kinds of deviations, from the traditional concept of what constitutes a family, can be observed.

Focus on material acquisition and personal comfort with nary a hint of unselfish considerations mean that every succeeding generation becomes more and more callous, unkind, ruthless and totally selfish. Everything is reduced to transaction with little thought for the intangible aspects of life. Love and adjustment have gone for a toss and the one who is kind, considerate and loving is taken to be a nerd, a nut who is good for nothing and meant to be taken for a right royal ride. When the entire focus is on oneself, the question of adjustment does not arise. In any joint family this predisposition to adjust is crucial if everyone has to stay together in harmony and peace. Everyone MUST adjust and in this adjustment find happiness. Rather, find CONTENTMENT!

The problem is that everyone is running around seeking happiness when it is already extant within us. We have only to recognize it as such. We also have to realize that happiness is primarily fleeting whereas contentment is eternal in a manner of speaking. Happiness is ephemeral because it is founded in desire and acquisition. Contentment is everlasting simply because it is based on simplicity, making do with whatever is available, adjusting to the prevailing circumstances whilst endeavouring to modulate its impact, and generally leading unselfish life.

When the focus shifts to personal matters at the cost of the family and selfish motives rule the roost, it is only natural that conflicts set in and families begin to crumble. What happens in joint families is also naturally replicated in nuclear families, which is why we observe the deviations mentioned earlier. When our children are brought up without even a semblance of Vedic SAMSKARA and the lady of the house has little time to devote to the upbringing of her children, they would naturally grow up to be independent in a manner of speaking but sorely lacking interpersonal skills and the sterling character that will stand them in good stead as they face the trials and tribulations of life. Independent maybe but at the cost of realizing the value of interdependence!

The Vedic concept of strengthening Society through integrated family ties is far superior to any other system advocated by proponents of modern thinking. A family that eats together stays together. Our .elders insisted that at least one meal a day had to be eaten at the same time by all members of the family with no exceptions permitted. This fortified the connecting fibres of the family and inculcation of samskara was automatic. A well-knit family is a powerful entity. It was in the not so distant past that entire extendedfamilies used to mingle with each other personally, making for memorable joyousmoments. Nowadays, staying in touch means being digitally connected, never mind if there is lack of sincere feeling it often entails. For all the digital magic of instant connectivity it is impossible to replace the true magic of the personal touch by concerned folk.

For all the problems associated with joint families where elderly parents and their offspring stay together in the traditional system, it is still advantageous in many ways. This is because the driving forces here are LOVE and DUTY which are far superior to mere materialistic acquisition, living only for one's own self. It takes care of multidimensional aspects of life in a streamlined manner. An example is relevant here.

This author had the privilege of a wonderful aspect of the joint family system revealed to him by his mentor, a Teacher par excellence of great erudition and endearing humility, when some guests who had migrated to a powerful country visited them. A culture entirely different from Vedic culture meant adjustment and naturally a scarcely disguised contempt crept in for the situations our poor dear countrymen found themselves in. The guests waxed eloquent about superb Quality of Life in that country and compared our lifestyles unfavourably, asking my mentor WHY he did not wish to migrate. A 'superb' Quality of Life where over 80% of the world's resources are recklessly squandered by a measly 15% or so of the world population!

My mentor, who has extensively travelled abroad at the express invitation of the high and mighty, representing our nation at world meetings where his scholarly expositions on our incomparable Spiritual Cultural Wisdom Heritage were very well received, simply smiled and said that such materialistic attractions hold no interest. He much prefers the spiritually dynamic ambience of our country. He then asked his guests about the family life there when the faces of the guests fell. They admitted that there is scarcely any personal interaction even WITHIN nuclear families since everyone is busy running around making money and still more money in any and every which way.

Everything had to be insured. Children had to be kept in the "professional" care of perfect strangers since there were no elders in the nuclear families there. No one had the time to waste in small niceties of life. Too many important things had to be done in an extremely fast-paced lifestyle. Older people were sent to old age "homes" since there was no space for them in their own homes. My mentor intervened saying, "When there is no space in the heart where can there be space in the home?".

When the very concept of family and family tradition is sacrificed at the altar of personal expediency, everything goes for a toss. Interaction with own family is replaced by transactions with strangers. Personal ego considerations, which prevent adjustment with family members, are perforce suppressed when perfect strangers give their professional services for steep fees when the same could be got for free if only a modicum of mutual love and adjustment between members of the joint family were present. Earlier, even extended families would chip in when the chips were down. A far cry indeed from the prevailing ethos!

In the joint family system, the elders got the opportunity of playing with their grandchildren and simultaneously inculcating SAMSKARA in them. Children had their own family members who lovingly took care of them negating requirement of professional 'minders' who have no personal stake in the genuine welfare of the wards under their professional care. Professionals are supposed to be, well, professional!

As regards insurance against anything untoward, my mentor opined that the joint family itself was the most wonderful insurance which did not cost money. A genuine love and respect for family traditions was the only premium required for this premium lifelong policy. With such powerful traditional bonds of familial love ruling strong, where was the space for commercial transactions? These could be made possible only by WEAKENING the joint family structures which also had other important ramifications vis-à-vis controlling powers and rendering people at large helpless and at the mercy of powerful vested interest once the time-tested Vedic systems were rendered irrelevant in the new scheme of things. No wonder insidious covert considerations became the touchstone for success in the changed order.

The Vedic Way on the other hand, ensured that EVERYONE was strengthened. It was unity, suffused with love and responsibility towards one's duties in the joint family, which was paramount in the social order. We find the following in the Atharva Veda which speaks for itself.

ज्यायस्वन्तश्चित्तिनो मावि यौष्ट
सं राधयन्त : सधुराश्चरन्त : ।
अन्यो अन्यस्मै वल्गुवदन्तएत
सध्राचीनान्व :समनस्कृणोमि ।।
अथर्व /३/३०/५

This means :

O you members of the family some of whom are elders with deep knowledge and all are united in carrying onerous responsibility of maintaining the family, attaining success in all good things, may it never be that you get separated from each other due to differences but always stay close to each other in unalloyed love and affection with sweet truthful speech. I, God Almighty, Cosmic Inspirational Force Eternal, will make you helpful and of one mind with the family.

There is now a choice, an option before us. Do we prefer the hoary time-tested value systems of the pioneering Vedic seers who once walked upon the sacred soil of our beloved Motherland? Or, do we prefer to blindly ape alien systems in the erroneous belief that these are infinitely superior? Your call!

We will stop here. So, Friend, till we meet again next month and even thereafter, SHUBHAM BHAVATU! May Good Prevail! KALYANAMASTU! May Total Weal Manifest!

[Reproduced with permission from "Vedic Way"; copyright vests with the author. All rights reserved.]

ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಪಾತ್ರರಾದ ಧೀಮಂತ ಪತ್ರಿಕೋದ್ಯಮಿ - ಶ್ರೀ ಎಲ್. ಎಸ್. ಶಾಸ್ತ್ರಿ

✍ ಶಶಿಕಲಾ ಹೆಗಡೆ



ಕಳೆದ ಐದು ದಶಕಗಳಿಂದ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀ ಲಕ್ಷ್ಮೀನಾರಾಯಣ ಶಂಭು ಶಾಸ್ತ್ರಿಯವರದ್ದು ಬಹುಮುಖ ಪ್ರತಿಭೆ. ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿ, ಗಾಯಕರಾಗಿ ಜನಮನಸೂರೆ ಗೊಂಡಿದ್ದಾರೆ. ಅನೇಕ ಸಂಘಟನೆಗಳನ್ನು ಕಟ್ಟುವ ಮೂಲಕ ಸಭೆ, ಸಮಾರಂಭ ಗಳನ್ನು ಆಯೋಜಿಸಿದ ಚತುರ ಸಂಘಟನಾಕಾರರು. ಗಮಕವಾಚನ, ಆಕಾಶವಾಣಿ ಕಾರ್ಯಕ್ರಮ, ಯಕ್ಷಗಾನ ಪ್ರದರ್ಶನ, ನಾಟಕಗಳಲ್ಲಿ ಅಭಿನಯ, ಸಂಗೀತ ನೃತ್ಯ ತರಬೇತಿ ಶಾಲೆ ಸ್ಥಾಪನೆ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರಾದ ಶಾಸ್ತ್ರಿಯವರು ಸದಾ ಚಟುವಟಿಕೆಯಲ್ಲಿರುವವರು.

ಮೂಲತಃ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶ್ರೀ ಶಾಸ್ತ್ರಿಯವರು ಹುಟ್ಟಿದ ಊರಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿ, 1962 ಜನವರಿ 26 ರಂದು ಪತ್ರಿಕಾರಂಗಕ್ಕೆ ಪಾದಾರ್ಪಣೆಗೈದರು. ಇವರ ಕಲಾ ಸಾಹಿತ್ಯಕ ಪತ್ರಿಕೆಯಾದ 'ಶೃಂಗಾರ' ಡಾ. ದ. ರಾ. ಬೇಂದ್ರೆಯವರಿಂದ ಬಿಡುಗಡೆಯಾಗಿದೆ. ಶ್ರೀ ಶಾಸ್ತ್ರಿಯವರು ಪ್ರಸಿದ್ಧ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಹಿರಿಯ ಉಪಸಂಪಾದಕರಾಗಿ, ಸಂಯುಕ್ತ ಕರ್ನಾಟಕದಲ್ಲಿ ವರದಿಗಾರರಾಗಿ, ಜನತಾ ವಾರಪತ್ರಿಕೆ, ನಾಡೋಜ ದಿನಪತ್ರಿಕೆಗಳಲ್ಲಿ ಸಂಪಾದಕರಾಗಿ, ವಿಶ್ವವಾಣಿ - ಪ್ರಪಂಚದಲ್ಲಿ ಉಪಸಂಪಾದಕರಾಗಿ ಸಕ್ರಿಯವಾಗಿ ಕೆಲಸ ಮಾಡಿದ್ದಲ್ಲದೆ ಇನ್ನೂ ಹಲವಾರು ಮಾಸಿಕ, ದೈನಿಕಗಳಲ್ಲಿ ವರದಿಗಾರರಾಗಿ ದುಡಿದಿದ್ದಾರೆ. ಕನ್ನಡ, ಹಿಂದಿ, ಮರಾಠಿ, ಸಂಸ್ಕೃತ, ಇಂಗ್ಲಿಷ್ ಮತ್ತು ಕೊಂಕಣಿ ಭಾಷೆಗಳನ್ನು ಬಲ್ಲ ಇವರಿಗೆ ಎಲ್ಲಾ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ವರದಿ ಮಾಡಲು ಇವರ ಭಾಷಾಜ್ಞಾನವೂ ನೆರವಾಯಿತು. ರಾಜ್ಯ ಪತ್ರಕರ್ತರ 22ನೇ ಸಮ್ಮೇಳನವನ್ನು ಬೆಳಗಾವಿಯಲ್ಲಿ ಸಂಘಟಿಸಿದ ಇವರು ಪತ್ರಿಕಾ ತರಬೇತಿ ಶಿಬಿರಗಳನ್ನು ಕೂಡ ಆಯೋಜಿಸಿದ್ದಾರೆ. ಹಲವು ಯುವ ಉದಯೋನ್ಮುಖ ಪತ್ರಕರ್ತರಿಗೆ ಸಲಹೆ, ಮಾರ್ಗದರ್ಶನಗಳನ್ನಿತ್ತು ಪ್ರೋತ್ಸಾಹಿಸಿದ್ದಾರೆ. ಜಿಲ್ಲಾ ಸಣ್ಣ ಪತ್ರಿಕೆಗಳ ಸಂಘ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕಗಳನ್ನು ಸ್ಥಾಪಿಸಿ, ನೂರಾರು ಕಾರ್ಯಕ್ರಮಗಳನ್ನು ಸಂಘಟಿಸಿ ಗ್ರಾಮೀಣ ಪತ್ರಕರ್ತರಿಗೆ ಪ್ರೋತ್ಸಾಹವನ್ನಿತ್ತಿದ್ದಾರೆ.

ಬೆಂಗಳೂರು, ಮೌಂಟ್ ಅಬು, ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಹೀಗೆ ಹಲವೆಡೆ ಮಾಧ್ಯಮ ಗೋಷ್ಠಿಗಳಲ್ಲಿ ಉಪನ್ಯಾಸ, ಪ್ರಬಂಧಗಳನ್ನು ಮಂಡಿಸಿದ್ದಾರೆ. ಹೀಗೆ ಪತ್ರಿಕೋದ್ಯಮದಲ್ಲಿ ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡ ಶಾಸ್ತ್ರಿಯವರನ್ನು ಪತ್ರಿಕಾರಂಗದ ಪಿತಾಮಹರಲ್ಲಿ ಒಬ್ಬರು, ಪತ್ರಿಕಾರಂಗದ ಅಮೂಲ್ಯವಾದ ಆಸ್ತಿ ಎನ್ನಬಹುದು.

ವೃತ್ತಿಯಲ್ಲಿ ಪತ್ರಿಕೋದ್ಯಮಿಯಾದ ಶಾಸ್ತ್ರಿಯವರು ಸಾಹಿತ್ಯ, ಸಂಗೀತ, ಗಮಕ, ನಾಟಕ, ಯಕ್ಷಗಾನಗಳನ್ನು ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡವರು. ಸೃಜನಶೀಲ ಲೇಖಕರಾದ ಇವರ ಕತೆ, ಕವನ, ಹರಟೆ, ಲಲಿತ ಪ್ರಬಂಧ, ಚುಟುಕು, ಜೀವನ ಚರಿತ್ರೆ, ಯಕ್ಷಗಾನ, ಇತಿಹಾಸ, ವೈದ್ಯಕೀಯ, ಮಕ್ಕಳ ಸಾಹಿತ್ಯ, ಶರಣರ ಸಾಹಿತ್ಯ ಹೀಗೆ ವೈವಿಧ್ಯಮಯ ವಿಷಯಗಳಲ್ಲಿ 42ಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. 150ಕ್ಕೂ ಹೆಚ್ಚು ಸಂಪಾದಿತ ಸ್ಮರಣ ಸಂಚಿಕೆಗಳು, ಅಭಿನಂದನ ಗ್ರಂಥಗಳು ಹಾಗೂ ವಿಶೇಷಾಂಕಗಳು ಪ್ರಕಟವಾಗಿವೆ.

15ಕ್ಕೂ ಹೆಚ್ಚು ಸಾಹಿತ್ಯಿಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿದ್ದಲ್ಲದೇ ಇಲ್ಲಿಯವರೆಗೆ ಐದು ಸಾವಿರಕ್ಕೂ ಹೆಚ್ಚು ಸಾಹಿತ್ಯಕ ಕಾರ್ಯಕ್ರಮಗಳನ್ನು ಸಂಘಟಿಸಿ ತಮ್ಮ ಸಂಘಟನಾ ಚಾತುರ್ಯದಿಂದ ಅಸಾಧ್ಯವೆನಿಸುವ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ.

ಯಕ್ಷಗಾನ ರಂಗದಲ್ಲಿ ಹೆಸರುವಾಸಿಯಾದ 'ಕೆರೆಮನೆ'ಯ ಹಿನ್ನೆಲೆಯಿರುವ ಇವರಲ್ಲಿ ಯಕ್ಷಗಾನದ ಬಗ್ಗೆ ಪ್ರೀತಿ ಪ್ರತಿಭೆ ರಕ್ತಗತವಾಗಿ ಬಂದಿರಬೇಕು. ಯಕ್ಷಗಾನ ಕಲೆಯ ಬಗ್ಗೆ ಅಧ್ಯಯನ ನಡೆಸಿದ್ದಲ್ಲದೇ ಕಲೆ - ಕಲಾವಿದರ ಕುರಿತು ಐದು ಕೃತಿಗಳನ್ನು, 50ಕ್ಕೂ ಹೆಚ್ಚು ಲೇಖನಗಳನ್ನು ರಚಿಸಿದ್ದಾರೆ. ಯಕ್ಷಗಾನ ತರಬೇತಿ ಶಿಬಿರ, ಸಮ್ಮೇಳನಗಳನ್ನು ಸಂಘಟಿಸಿದ ಇವರು ಹವ್ಯಾಸಿ ಯಕ್ಷಗಾನ ಕಲಾವಿದರೂ ಕೂಡ. ಹಲವೆಡೆ ಯಕ್ಷಗಾನ ಗೋಷ್ಠಿಗಳಲ್ಲಿ ಉಪನ್ಯಾಸ ನೀಡಿದ್ದಲ್ಲದೇ ದೂರದರ್ಶನ ಆಕಾಶವಾಣಿಗಳಲ್ಲಿ ಯಕ್ಷಗಾನ ಕಲಾಪ್ರದರ್ಶನವನ್ನೂ ನೀಡಿದ್ದಾರೆ.

ರಾಜ್ಯ ಹಾಗೂ ವಿಭಾಗೀಯ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಮೂರು ಬಾರಿ ಪ್ರಥಮ ಬಹುಮಾನ ಗಳಿಸಿದ ಶಾಸ್ತ್ರಿಯವರು ಹವ್ಯಾಸಿ ರಂಗಭೂಮಿ ಕಲಾವಿದರಾಗಿ ನೂರಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. 50ಕ್ಕೂ ಹೆಚ್ಚು ವೃತ್ತಿ ನಾಟಕ ಕಂಪನಿಗಳ ಕಲಾವಿದರ ಸಂದರ್ಶನ, ಪರಿಚಯ ಲೇಖನಗಳನ್ನು ರಚಿಸಿದ್ದಾರೆ.

ಖ್ಯಾತ ಸಂಗೀತಕಾರರಾದ ಪಂ. ರಾಜೀವ ಪುರಂದರ, ದಿ. ಆರ್. ಜಿ. ದೇಸಾಯಿಯವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಅಭ್ಯಾಸ ಮಾಡಿ ಹಲವಾರು ಪ್ರಸಿದ್ಧ ಸಂಗೀತ ಕಲಾವಿದರಿಂದ ಮಾರ್ಗದರ್ಶನ ಪಡೆದು 200 ಕ್ಕೂ ಹೆಚ್ಚು ಸುಗಮ ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದ ಹೆಗ್ಗಳಿಕೆ ಶಾಸ್ತ್ರಿಯವರದ್ದು. ಇಂಪು ಸುಗಮ ಸಂಗೀತ ವೇದಿಕೆಯನ್ನು ಸ್ಥಾಪಿಸಿದ ಇವರು ಗೀತ ಗೋವಿಂದ, ಗೀತ ರಾಮಾಯಣ ಮೊದಲಾದವುಗಳಿಗೆ ರಾಗ ಸಂಯೋಜಿದ್ದಲ್ಲದೆ, ನಾಡಿನ ವಿವಿದೆಡೆ 80ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿ ಜನಪ್ರಿಯರಾಗಿದ್ದಾರೆ.

ಗಮಕ ವಾಚನದಲ್ಲಿ ಪರಿಣತಿಯನ್ನು ಹೊಂದಿದ ಇವರ ತಾಯಿಯಿಂದ ಗಮಕ ಕಲೆ ಶಾಸ್ತ್ರಿಯವರಿಗೆ ವಂಶ ಪಾರಂಪರ್ಯವಾಗಿ ಹರಿದು ಬಂದಿರಬೇಕು. ಸಾಹಿತ್ಯ, ಸಂಗೀತ ಜ್ಞಾನ ಇರುವ ಇವರು 100ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಗಮಕ ವಾಚನವನ್ನು ವಾಚಿಸಿದ್ದರಲ್ಲದೆ ಗಮಕ ಕಲಾ ಸಮ್ಮೇಳನವನ್ನೂ ಸಂಯೋಜಿಸಿದ್ದಾರೆ. ಅಲ್ಲದೇ ಕರ್ನಾಟಕ ಗಮಕ ಕಲಾ ಪರಿಷತ್ತಿನ ಬೆಳಗಾವಿ ಜಿಲ್ಲಾ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಹೀಗೆ ಪತ್ರಿಕೋದ್ಯಮ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸದಾ ತೊಡಗಿಸಿಕೊಂಡ ಶಾಸ್ತ್ರಿಯವರನ್ನು ಅರಸಿಕೊಂಡು ಬಂದ ಪ್ರಶಸ್ತಿಗಳು ಹಲವಾರು. ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ, ಜಿ. ಆರ್. ಪಾಂಡೇಶ್ವರ ಪತ್ರಿಕಾ ಪ್ರಶಸ್ತಿ, ಕುಮಾರವ್ಯಾಸ ಪ್ರಶಸ್ತಿ, ದಿನಕರ ದೇಸಾಯಿ ಚುಟುಕು ಕಾವ್ಯ ಪ್ರಶಸ್ತಿ, ಸೇವಾರತ್ನ ಪ್ರಶಸ್ತಿ ನಾಗನೂರು ಮಠ, ಸಿರಿಗನ್ನಡ ಪುಸ್ತಕ ಪ್ರಶಸ್ತಿ, ಕನ್ನಡ ಜ್ಯೋತಿ ಪ್ರಶಸ್ತಿ ಅವುಗಳಲ್ಲಿ ಕೆಲವು.

ಹತ್ತಾರು ಆಸಕ್ತಿಗಳನ್ನು ತನ್ನೊಳಗೆ ಉಳಿಸಿಕೊಂಡು ತನ್ನ ಸುತ್ತಲಿನವರನ್ನು ಬೆಳೆಸುವ, ತನ್ನಲ್ಲಿರುವ ಪ್ರತಿಭೆಯನ್ನು ಹಂಚುವ, ಸದಾ ಒಂದಿಲ್ಲೊಂದು ಕಾರ್ಯಕ್ರಮ ಹಮ್ಮಿಕೊಳ್ಳುತ್ತಾ, ಚಟುವಟಿಕೆಯಲ್ಲಿರುವ ಶಾಸ್ತ್ರಿಯವರದ್ದು ಶಿಸ್ತಿನ ನಡೆ, ಶ್ರಮಪೂರ್ಣ ದುಡಿಮೆ, ಜೀವನ ಶೋಧಕ್ಕೆ ಹೊರಟಂತಹ ಮನೋಭಾವ. ನಾಡು, ನುಡಿಗಳ ಅಭಿವೃದ್ಧಿಗೆ ಶ್ರಮಿಸಿದ ಹಿರಿಯ ಧೀಮಂತ ಪತ್ರಿಕೋದ್ಯಮಿಯಾದ ಶ್ರೀ ಲಕ್ಷ್ಮೀನಾರಾಯಣ ಶಾಸ್ತ್ರಿಯವರು ಈ ವರ್ಷದ ಕರ್ಕಿವೆಂಕಟರಮಣ ಶಾಸ್ತ್ರಿ ಸೂರಿ ಪ್ರಶಸ್ತಿಗೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಅವರಿಗೆ ಹೃದಯಪೂರ್ವಕ ಆದರದ ಅಭಿನಂದನೆಗಳು.

UIL

UGRU INDUSTRIES

With Best Compliments from

UGRU INDUSTRIES

Manufacturers of Speciality food products

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.

ಭಾವಗಳ ಗೆಳೆಯ

– ಅನಿತಾ ಪಿ. ಪೂಜಾರಿ, ತಾಕೋಡೆ
(ಆಧಾರ : ಅಂತರಂಗದ ಮೃದಂಗ)

ಆ ಸಂಜೆ ಹೊತ್ತಿನಲಿ
ದಿನಕರನ ಕೆಂಪು ಛಾಯೆಯಲಿ
ಬೆಟ್ಟವೇರಿ ಬಂಡೆಗಲ್ಲು ಹತ್ತಿ
ಭಾವದೂರಿನಲಿ ಅಲೆದಾಡಿದಾಗ
ಕೈಯಾಡಿಸಿ ಬಳಿ ಕರೆದ
ಭಾವಗಳ ಗೆಳೆಯ ನೀನು

ಕವಿಮನದ ಭಾವಕೆ
ಮನಗಳ ಅಲೆಯುವ ಹಂಬಲ
ಅರಿವನು ಅರಳಿಸಿದಾಗ
ನಯನದ ಚಿತ್ರಪಟದಲ್ಲಿ
ಮತ್ತೆ ಮತ್ತೆ ಮೈದಳೆದ
ಭಾವಗಳ ಗೆಳೆಯ ನೀನು

ಅಕ್ಷರದ ಮೇರು ಶಿಖರದತ್ತ ಉರುಳಲಿಲ್ಲ
ಖಜಾನೆಯತ್ತ ದೃಷ್ಟಿ ಹೊರಳಲಿಲ್ಲ
ಅಬ್ಬರದ ಅಲೆ ಮೇಲೆ ಅಲೆದವನ
ಸುಳಿಯೊಳಾಡಿ ಬಂದವನ
ಸರಳ ಸಜ್ಜನಿಕೆ ಮೊಗದ
ಭಾವಗಳ ಗೆಳೆಯ ನೀನು

ಕಣ್ಣರಿಯದೆ ಮನವರಿತಿದೆ
ಮಾತಾಡದೆ ಮನ ಸೆಳೆದಿದೆ
ಯಾಕೆ ಏನೆಂಬ ಹುಳವ ಬಿಟ್ಟು
ಮರೆವಿನ ಗೂಡೊಳಗೆ ಸರಿಯಬೇಡ
ಬಾಂಧವ್ಯದೊಲುಮೆಯೊಳು ಬಂದ
ಭಾವಗಳ ಗೆಳೆಯ ನೀನು

ನೆಚ್ಚಿ ಹೇಳಿದರೆ ಮನಬಿಚ್ಚಿ ಕೇಳುವೆ
ಹುಚ್ಚಿಯೆನಬೇಡ ಹೊಳೆದುದ ಹೇಳುವೆ
ನೀ ಸೋಸಿ ಕೇಳು, ಮೆಚ್ಚುಗೆಯ ಮಾತಾಡುವೆ
ಸ್ನೇಹದ ನಾವೆ ಏರ ಬಂದವಳು
ನಿಂತ ಕೊಳವಲ್ಲ ಹರಿವ ನೀರೆ
ನಾನಾಗಬಹುದೇ ನಿನ್ನ ಭಾವಗಳ ಗೆಳತಿ

❀ ❀ ❀

ಸಂಸ್ಕೃತ ಸಾಹಿತ್ಯದ ಹಿರಿಮೆ

✍ ಶೈಲಜಾ ಹೆಗಡೆ, ಮುಂಬಯಿ

ಭರ್ತೃಹರಿ :

ಗೀತ ಕಾವ್ಯಗಳ ರಚನೆಯಲ್ಲಿ ಅಗ್ರಗಣ್ಯನಾದ ಭರ್ತೃಹರಿ ಸಂಸ್ಕೃತ ಸಾಹಿತ್ಯದ ಮೇರುಕವಿ. ಶೃಂಗಾರ ಶತಕ, ನೀತಿ ಶತಕ ಮತ್ತು ವೈರಾಗ್ಯ ಶತಕ ಇವು ಈತನ ಪ್ರಸಿದ್ಧ ಕೃತಿಗಳು. ಶೃಂಗಾರ ಶತಕದಲ್ಲಿ ರಮಣಿಯರ ರೂಪವಿಲಾಸವೂ, ನೀತಿಶತಕದಲ್ಲಿ ನೀತಿಯುಕ್ತ ಅನುಭವಜನ್ಯ ಆದೇಶಗಳೂ, ವೈರಾಗ್ಯಶತಕದಲ್ಲಿ ವೈರಾಗ್ಯದ ಶುಭ್ರಪ್ರಕಾಶವೂ ವ್ಯಕ್ತವಾಗಿವೆ. ಪ್ರತಿಯೊಂದು ಶತಕದಲ್ಲಿಯೂ ನೂರಕ್ಕಿಂತ ಅಧಿಕ ಪದ್ಯಗಳಿದ್ದು, ಅವು ಒಂದೊಂದೂ ಲಘು ಕವಿತೆಯನ್ನು ಪ್ರತಿನಿಧಿಸುತ್ತವೆ ಹಾಗೂ ಕವಿಯ ಜೀವನದ ಕುರಿತಾದ ಎಲ್ಲಾ ಕ್ಷೇತ್ರಗಳ ವ್ಯಾಪಕ ಅನುಭವಗಳನ್ನು ಅಭಿವ್ಯಕ್ತಿಗೊಳಿಸಿವೆ. ಶತಕಗಳ ಭಾಷೆ ಕೂಡ ಸರಳವೂ, ಅರ್ಥಪೂರ್ಣವೂ ಆಗಿದೆ. ಶಾರ್ದೂಲ ವಿಕ್ರೀಡಿತ ಛಂದದ ಬಾಹುಳ್ಯವನ್ನು ಹೊಂದಿದ ಇವುಗಳು ವೈದರ್ಭೀ ಶೈಲಿಯಲ್ಲಿ ರೂಪುಗೊಂಡಿವೆ.

ಭರ್ತೃಹರಿಯು ಜೀವನದಲ್ಲಿ ಗೃಹಸ್ಥನೂ, ರಾಜನೂ, ಸರ್ವಸಂಗ ಪರಿತ್ಯಾಗಿ ಸನ್ಯಾಸಿಯೂ ಆಗಿ ಜೀವಿಸಿದ್ದರಿಂದ ಆತನ ಶತಕಗಳು ಬದುಕಿನ ಸಜೀವ ಚಿತ್ರಣವನ್ನು ನಿರೂಪಿಸುತ್ತವೆ. ದೈನಿಕ ಜೀವನದ ಗೂಢ ಹಾಗೂ ಪ್ರತ್ಯಕ್ಷ ಸತ್ಯಗಳ ಯಥಾರ್ಥ ಚಿತ್ರಣ ಇವುಗಳಲ್ಲಡಗಿದೆ. ನೀತಿಶತಕವು ವಿದ್ಯೆ, ವೀರತ್ವ, ಸಾಹಸ, ಸ್ನೇಹ, ಪರೋಪಕಾರ, ಸತ್ಸಂಗತಿ, ಉದ್ಯೋಗ, ಉದಾರತೆಯೇ ಮೊದಲಾದ ಉದಾತ್ತ ಗುಣಗಳ ವರ್ಣನೆಯಿಂದ ಕೂಡಿದೆ. ವೈರಾಗ್ಯ ಶತಕದಲ್ಲಿ ಕವಿಯು ಸಂಸಾರ ಹಾಗೂ ಘನ ವೈಭವದ ನಿಸ್ಸಾರತೆಯನ್ನು ಯುಕ್ತಿಪೂರ್ವಕವಾಗಿ ಪ್ರತಿಪಾದಿಸಿದ್ದಾನೆ. ಈ ಶತಕದಲ್ಲಿ ಕವಿಯ ವಿಚಾರಸರಣಿ ಆಕರ್ಷಣೆಯಿಂದ ವಿಕರ್ಷಣೆಯೆಡೆಗೆ, ಪ್ರಣಯದಿಂದ ಅಪ್ರಣಯದ ಕಡೆಗೆ ಹರಿದಿರುವುದನ್ನೂ ಗುರುತಿಸಬಹುದಾಗಿದೆ. ಕಾವ್ಯ ಪ್ರತಿಭೆ ಮತ್ತು ದಾರ್ಶನಿಕತೆ ಇವುಗಳ ಸುಂದರ ಮಣಿಕಾಂಚನ ಸಂಯೋಗವನ್ನು ಭರ್ತೃಹರಿಯ ಕಾವ್ಯಗಳಲ್ಲಲ್ಲದೆ ಇನ್ನೊಂದೆಡೆ ಕಾಣಲು ಸಾಧ್ಯವಿಲ್ಲ. ಆತನ ಶತಕಗಳ ವಿಶೇಷತೆಯನ್ನು ಒಂದೊಂದಾಗಿ ಕೆಲವೇ ಪದ್ಯಗಳಲ್ಲಿ ಗಮನಿಸಬಹುದು. ಮೊದಲನೆಯದಾಗಿ, ನಾರಿ ಸೌಂದರ್ಯವನ್ನು ವಿಧ ವಿಧವಾಗಿ ವರ್ಣಿಸುವ ಶೃಂಗಾರ ಶತಕದಲ್ಲಿಯ ಸಂಭೋಗ ಶೃಂಗಾರದ ಪದ್ಯ;

ಉರಸಿ ನಿಪತಿತಾನಾಂ ಸಸ್ತಧಮ್ಮಿಲ್ಲಕಾನಾಂ
ಮುಕುಲಿತ ನಯನಾನಾಂ ಕಿಂಚಿದುನ್ಮೀಲಿತಾನಾಂ
ಉಪರಿಸುರತ ಖೇದ ಸ್ವಿನ್ನ ಗಂಡಸ್ಥಲಾನಾಂ
ಅಧರಮಧು ವಧುನಾಂ ಭಾಗ್ಯವಂತಹ ಪಿಬಂತಿ।।

'ಕೆದರಿದ ಕೂದಲುಳ್ಳ, ಅರ್ಧ ತೆರೆದ ಕಣ್ಣುಗಳುಳ್ಳ, ಸುರತ ಕ್ರೀಡೆಯಿಂದ ಬೆವರಿದ ಕೆನ್ನೆಗಳುಳ್ಳ, ಎದೆಗೊರಗಿ ಆಶ್ರಯವನ್ನು ಪಡೆಯುತ್ತಿರುವಂತಹ ಸ್ತ್ರೀಯರ ಅಧರ ಮಧುಪಾನವನ್ನು ಭಾಗ್ಯವಂತರು ಮಾತ್ರ ಪಡೆಯಲು ಸಾಧ್ಯ'.

ಜೀವನದ ಕಟುಸತ್ಯವನ್ನು ನಿಷ್ಠುರವಾಗಿ ಹೊರಗೆಡಹುವ ನೀತಿಶತಕದ ಕೆಲವು ಪದ್ಯಗಳು-

ಭವಂತಿ ನಮ್ರಾಸ್ತರವಃ ಫಲೋದ್ಗಮೈ-
ರ್ನವಾಂಬುಭಿರ್ದೂರ ವಿಲಂಬಿನೋ ಘನಾಃ ।।
ಅನುದ್ಧತಾಸ್ಸತ್ಪುರುಷಾಸಮೃದ್ಧಿಭಿಃ
ಸ್ವಭಾವ ಏವೈಷ ಪರೋಪಕಾರಿಣಾಮ್ ।।

ಫಲಭಾರದಿಂದ ವೃಕ್ಷಗಳು ಬಾಗುವಂತೆ, ಜಲಭಾರದಿಂದ ಮೋಡಗಳು ಕೆಳಗಿಳಿಯುವಂತೆ, ಪರೋಪಕಾರಿ ವ್ಯಕ್ತಿಗಳು ತಮ್ಮ ಸಮೃದ್ಧಿ ಕಾಲದಲ್ಲಿ ವಿನಮ್ರರಾಗಿಯೇ ವರ್ತಿಸುತ್ತಾರೆ.

ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋಪಿ ಸನ್।
ಮಣಿನಾಭೂಷಿತಂ ಸರ್ಪಃ ಕಿಮಸೌನ ಭಯಂಕರಃ।

ವಿದ್ಯೆಯಿಂದ ಅಲಂಕೃತನಾಗಿದ್ದರೂ ಕೂಡ ದುಷ್ಟನಿಂದ ದೂರವಿರಬೇಕು. (ಏಕೆಂದರೆ) ಮಣಿಯಿಂದ ಅಲಂಕೃತವಾಗಿದ್ದರೂ ಸರ್ಪವು ಭಯಂಕರವಾಗಿರುವುದಲ್ಲವೇ?

ಅಂತೆಯೇ ಭರ್ತೃಹರಿಯು ವಿದ್ಯೆ, ತಪಸ್ಸು, ದಾನ, ಶೀಲ, ಜ್ಞಾನ, ಧರ್ಮ ಮೊದಲಾದ ಜೀವನ ಮೌಲ್ಯಗಳಿಗೆ ಮಹತ್ವವನ್ನು ನೀಡಿದ್ದಾನೆ. ಅವುಗಳಿಲ್ಲದ ಜೀವನವನ್ನು ಆತನು ಮೃಗಗಳಿಗೆ ಹೋಲಿಸಿದ್ದಾನೆ.

ಯೇಷಾಂ ನ ವಿದ್ಯಾ ನ ತಪೋ ನ ದಾನಂ
ಜ್ಞಾನಂ ನ ಶೀಲಂ ನ ಗುಣೋ ನ ಧರ್ಮಃ।
ತೇ ಮರ್ತ್ಯಲೋಕೇ ಭುವಿ ಭಾರಭೂತಾಃ
ಮನುಷ್ಯರೂಪೇಣ ಮೃಗಾಶ್ಚರಂತಿ।।

ಯಾರಲ್ಲಿ ವಿದ್ಯೆ, ತಪಸ್ಸು, ದಾನ, ಜ್ಞಾನ, ಶೀಲ,ಗುಣ, ಧರ್ಮ ಮುಂತಾದವುಗಳು ಇರುವುದಿಲ್ಲವೋ ಅವರು ಭೂಭಾರಕರು. ಮನುಷ್ಯ ರೂಪದಲ್ಲಿ ಸಂಚರಿಸುವ ಮೃಗಗಳು.

ಅಸಾರವಾದ ಸಂಸಾರದ ಹಲವು ಸ್ಥಿತ್ಯಂತರಗಳನ್ನು ಮನೋಜ್ಞವಾಗಿ ಚಿತ್ರಿಸಿರುವುದನ್ನು ಮುಂದಿನ ಶ್ಲೋಕದಲ್ಲಿ ಕಾಣಬಹುದು.

ಕ್ವಚಿದ್ವೀಣಾವಾದಃ ಕ್ವಚಿದಪಿ ಚ ಹಾಹೇತಿ ರುದಿತಮ್।
ಕ್ವಚಿದ್ವಿದ್ವದ್ಗೋಷ್ಠಿ ಕ್ವಚಿದಪಿ ಸುರಾಮತ್ತ ಕಲಹಃ।
ಕ್ವಚಿದ್ರಾಮಾರಮ್ಯಃ ಕ್ವಚಿದಪಿ ಗಲತ್ಕುಂಠವಪುಷಾ।
ನ ಜಾನೇ ಸಂಸಾರಃ ಕಿಮಮೃತಮಯಃ ಕಿಂ ವಿಷಮಯಃ।।

'ಕೆಲವೊಮ್ಮೆ ವೀಣಾವಾದನ, ಕೆಲವೊಮ್ಮೆ ಹಾಹಾ ಎಂಬ ರೋದನ, ಕೆಲವೊಮ್ಮೆ ಪಂಡಿತರ ಗೋಷ್ಠಿ, ಕೆಲವೊಮ್ಮೆ ಸುರೆಯ ಅಮಲಿನಿಂದುಂಟಾದ ಜಗಳ, ಕೆಲವೊಮ್ಮೆ ಅತಿಶಯ ಸೌಂದರ್ಯ, ಕೆಲವೊಮ್ಮೆ ಕುಂಠಿತ ಶರೀರ; ಈ ಪ್ರಪಂಚವು ಅಮೃತಮಯವೋ ಅಥವಾ ವಿಷಮಯವೋ ನಾನರಿಯೆ!' ಎಂಬುದಾಗಿ ಕವಿಯು ಪ್ರಪಂಚದ ಕಟುಸತ್ಯಗಳನ್ನು ಹೃದಯಗ್ರಾಹಿಯಾಗಿ ಪ್ರಸ್ತುತಪಡಿಸಿದ್ದಾನೆ. ಅಂತೆಯೇ ಭರ್ತೃಹರಿಯ ಶತಕಗಳು ಸಾರಭೂತವಾದ ಲೋಕೋಕ್ತಿಗಳಿಂದ ಕೂಡಿವೆ.

ಭೋಗಾ ನ ಭುಕ್ತಾ ವಯಮೇವ ಭುಕ್ತಾ
ತಪೋ ನ ತಪ್ತಂ ವಯಮೇವ ತಪ್ತಾಃ।
ಕಾಲೋ ನ ಯಾತೋ ವಯಮೇವ ಯಾತಾ
ತೃಷ್ಣಾ ನ ಜೀರ್ಣಾ ವಯಮೇವ ಜೀರ್ಣಾಃ।।

ಇವಲ್ಲದೆ 'ವಾಗ್ಭೂಷಣಂ ಭೂಷಣಂ', 'ಸರ್ವೇ ಗುಣಾಃ ಕಾಂಚನಮಾಶ್ರಯಂತಿ', 'ವಿಭೂಷಣಂ ಮೌನಮಪಂಡಿತಾನಾಮ್', 'ಮೂರ್ಖಸ್ಯ ನಾಸ್ತ್ಯೌಷಧಮ್' ಇವೇ ಮೊದಲಾದ ನುಡಿಮುತ್ತುಗಳು ಈತನ ಶತಕಗಳಲ್ಲಿ ಹೇರಳವಾಗಿ ದೊರೆಯುತ್ತವೆ.

ಕವಿಯು ತನ್ನ ವೈರಾಗ್ಯ ಶತಕದಲ್ಲಿ ಸಾಂಸಾರಿಕ ಸುಖೋಪಭೋಗಗಳಲ್ಲಿ ನಿರಾಸಕ್ತನಾಗಿ, ಪರಮೇಶ್ವರನಲ್ಲಿ ಪರಮಾಸಕ್ತಿಯನ್ನು ಹೊಂದಿ, ಸರಳ ಜೀವನವನ್ನು ತನ್ನದಾಗಿಸಿಕೊಂಡು ಸುಖಿಯಾಗುವ ಮಾರ್ಗವನ್ನು ಬೋಧಿಸಿದ್ದಾನೆ. ವೈರಾಗ್ಯ ಶತಕದಲ್ಲಿ ಒಂದೆಡೆ ಆತನು ರಾಜ ಮತ್ತು ಸನ್ಯಾಸಿಯರ ಜೀವನದ ತುಲನಾತ್ಮಕ ವಿಶ್ಲೇಷಣೆಯನ್ನು ಸಮರ್ಥವಾಗಿ ನಿರೂಪಿಸಿದ್ದಾನೆ.

ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ।
ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ।
ಸ ತು ಭವತು ದರಿದ್ರೋ ಯಸ್ಯ ತೃಷ್ಣಾ ವಿಶಾಲಾ।
ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ।।

'ನಾವಾದರೋ ವಲ್ಕಲ ವಸ್ತ್ರದಿಂದ ಸಂತುಷ್ಟರು. ನೀನಾದರೋ ಬೆಲೆ ಬಾಳುವ ವಸ್ತ್ರದಿಂದ ಸಂತುಷ್ಟನು. ಇಬ್ಬರ ಸಂತೋಷವೂ ಸಮಾನವಾದುದು. ಅಧಿಕವಾದ ಆಸೆಯುಳ್ಳವನು ಮಾತ್ರ ದರಿದ್ರನು. ಸಂತುಷ್ಟಿ ಇದ್ದರೆ ಯಾರು ಧನಿಕರು? ಯಾರು ದರಿದ್ರರು?'.

ವ್ಯಾಘ್ರೀವ ತಿಷ್ಠತಿ ಜರಾ ಪರಿತರ್ಜಯಂತೀ
ರೋಗಾಶ್ಚ ಶತ್ರವ ಇವ ಪ್ರಹರಂತಿ ದೇಹಮ್
ಆಯುಃ ಪರಿಸ್ರವತಿ ಭಿನ್ನ ಘಟಾದಿವಾಂಭೋ
ಲೋಕಸ್ತಥಾಪ್ಯಹಿತಮಾಚರತೀತಿ ಚಿತ್ರಮ್।।

'ಮುಪ್ಪು ಹುಲಿಯಂತೆ ತಡೆಯುತ್ತಿರುತ್ತದೆ. ರೋಗವು ಶತ್ರುವಿನಂತೆ ಶರೀರವನ್ನು ಬಾಧಿಸುತ್ತಿರುತ್ತದೆ. ಆಯುಷ್ಯವು ಒಡೆದ ಮಡಕೆಯಲ್ಲಿ ತುಂಬಿದ ನೀರಿನಂತೆ ಕ್ಷೀಣವಾಗುತ್ತಿರುತ್ತದೆ. ಆದರೂ ಲೋಕದ ಜನರು ಅಹಿತ ಕಾರ್ಯಗಳಲ್ಲಿ ತೊಡಗಿರುತ್ತಾರೆ ಎಂಬುದೇ ಆಶ್ಚರ್ಯದ ಸಂಗತಿಯಾಗಿದೆ.'

ಹೀಗೆ ಭರ್ತೃಹರಿಯ ಶತಕಗಳಲ್ಲಿ ಪ್ರೇರಣಾದಾಯಕ ಸದ್ಬೋದನೆಗಳು ಅಪರಿಮಿತವಾಗಿವೆ. ಆದರೆ ಆತನ ಕಾಲದ ಬಗೆಗೆ ದೊರೆತ ಸಂಗತಿಗಳು ಚರ್ಚಾಸ್ಪದವಾಗಿವೆ. ಜನಶ್ರುತಿಗನುಸಾರವಾಗಿ ಅವನ ಕಾಲವನ್ನು ಆರನೇ ಶತಮಾನದ ಉತ್ತರಾರ್ಧವೆಂದು ಊಹಿಸಬಹುದು. ಭರ್ತೃಹರಿಯ ಶತಕ ತ್ರಯವು ಸಂಸ್ಕೃತ ಸಾಹಿತ್ಯಕ್ಕೆ ನೀಡಿದ ಅನುಪಮ ಕೊಡುಗೆಯೆಂಬುದನ್ನು ನಿಸ್ಸಂದೇಹವಾಗಿ ಹೇಳಬಹುದು. ಸಾರ್ವಕಾಲಿಕ ಮಹತ್ವವನ್ನು ಪಡೆದ ಈ ಶತಕಗಳು ಅಧ್ಯಯನ ಯೋಗ್ಯವಾಗಿವೆ.

Havyaka Welfare Trust - Account Details

Donors may directly remit the amount in below mentioned accounts of Havyaka Welfare Trust, Kalina, Santacruz (E), Mumbai - 400 098.

1. In favour of = Havyaka Welfare Trust
   Bank = Corporation bank
   Branch = Santacruz (E) Mumbai
   A/c. No. = 520141000107073
   IFSC Code = CORP 0000499

2. In favour of = Havyaka Welfare Trust Women Welfare Cell
   Bank = Corporation Bank
   Branch = Santacruz (E), Mumbai
   A/c. No. = 520141000108711
   IFSC Code = CORP 0000499

To arrange comfortable and enjoyable vacation
To the young or older generation
To get more and detailed information



Please contact this reliable person

ANJANA HEGDE
(Travel Agent)

Mobile - 8779751802 / 9820698445
Email : anjanatravels29@gmail.com

Provides a discounted deals in Flights / Hotels / Tour packages / Car Rentals / Bus / Travel Insurance, Suitable for individual seeking relaxing comfortable & memorable experiences in the tourism

Advt.

ಹಳ್ಳಿ ಹುಡುಗಿ ಪ್ಯಾಟೆ ಲೈಫು

✍ ಶಾಂತಾ ಶಾಸ್ತ್ರಿ

'ಹೌದು, ಎರಡು ಮೂರು ದಿನದಿಂದ ನಿನಗೆ ಒಂದು ವಿಚಾರ ಹೇಳಬೇಕು ಅಂತಿದ್ದೆ. ಆದ್ರೆ ಹೇಗೆ ಹೇಳಲಿ ಅಂತ ಯೋಚಿಸುತ್ತಿದ್ದೆ' ಎಂದು ಸ್ವಲ್ಪ ಮುಜುಗರ ಹಾಗೂ ಸಂತೋಷದಿಂದ ಸುಧೀರ ತನ್ನ ಮಾತನ್ನು ಆರಂಭಿಸಿದ್ದ. ಅಪ್ರಾಪ್ತ ಬಾಲಿಶ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದ ಹೆಂಡತಿಯ ಮನಸ್ಸನ್ನು ನೋಯಿಸಲಾರದೆ, ತನ್ನ ಆರ್ಥಿಕ ಸ್ಥಿತಿಯನ್ನು ಅಷ್ಟರಮಟ್ಟಿಗೆ ಅರಗಿಸಿಕೊಳ್ಳಲಾರದೆ ಪೇಚಾಡುತ್ತಿದ್ದ ಸುಧೀರ, ಕೆಲವು ಸ್ವಂತ ವಿಷಯಗಳನ್ನು ಆಪ್ತಮಿತ್ರನಾದ ಶ್ರೀಧರನಲ್ಲಿ ಹೇಳಿಕೊಂಡು ಸಲಹೆ ಕೇಳುತ್ತಿದ್ದ. ಹಾಂ! ಸಲಹೆ ಕೇಳುತ್ತಿದ್ದನೇನೋ ಸರಿ, ಎಷ್ಟರಮಟ್ಟಿಗೆ ಅದನ್ನು ಪಾಲಿಸುತ್ತಿದ್ದ ಎಂಬುದು ಅವನಿಗೇ ಗೊತ್ತು. ಹಾಗಾಗಿ ಇತ್ತಿತ್ತಲಾಗಿ ಶ್ರೀಧರನಿಗೆ ಗೆಳೆಯನ ಮಾತು ತಲೆಹರಟೆಯಾಗಿ ಕಾಣುತ್ತಿತ್ತು. ಈ ದಿನವೂ ಅಂಥ ಯಾವ ಹೊಸ ಕಟಕಟೆ ಪುರಾಣ ಕಾದಿದೆಯೋ ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತ 'ಏನೋ ಹಾಗಂದ್ರೆ? ಛೋಲೋ ಸುದ್ದೀನೋ? ಹಾಳು ಸುದ್ದೀನೋ? ಮೊದಲು ಹೇಳು. ಆಮೇಲೆ ಹೇಳುತ್ತೇನೆ, ನನಗದನ್ನ ನೀನು ಹೇಳಬಹುದೋ ಬೇಡವೋ ಅಂತ' ಎಂದು ನಯವಾಗಿ ಗದರಿಸಿದ.

'ಇಲ್ಲ ಮಹರಾಯಾ, ಅಂಥದ್ದೇನು ಇಲ್ಲಾ, ಛೋಲೋ ಸುದ್ದೀನೇ, ನೀನು ಬೇಡಾ ಅಂದ್ರೂ ನಾನು ಹೇಳೇ ಬಿಡುತ್ತೇನೆ ಇವತ್ತು. ನನ್ನವಳು ಊರಿಂದ ಬಂದಾಗಿನಿಂದ ಒಳ್ಳೆ ಸುಧಾರಿಸಿದ ರೀತಿಯಲ್ಲಿ ನಡಕೋತಿದಾಳೆ. ಇದು ಎಷ್ಟು ದಿನದ ಭಾಗ್ಯಾನೋ ಗೊತ್ತಿಲ್ಲ. ಅಂತೂ ಊರಿಂದ ಬರುವಾಗ ಸ್ವಲ್ಪ 'ಥೇಟ್' ಆಗಿ ಬಂದಿದ್ದಾಳೆ' ಎಂದು ಒಳ್ಳೆ ಸಂಭ್ರಮದಿಂದ ಸುಧೀರ ಹೇಳಿಕೊಂಡ.

'ಹೂಂ! ನಿನ್ನಮ್ಮನೋ ಅವಳಮ್ಮನೋ ಬೋಧೆ ತುಂಬಿ ಕಳಿಸಿರಬೇಕು. ಒಳ್ಳೆಯದೆ ಆಯಿತು ಬಿಡು'.

'ಎಹೆ, ಅಂಥ ಬೋಧೆಗಳಿಗೆಲ್ಲ ಮಣಿಯುವವಳಲ್ಲ ಇವಳು, ಅಂಥ ಮಾತುಗಳೆಲ್ಲ ಅವಳಿಗೆ ತಾಗುತ್ತಿದ್ದರೆ, ಆರು ತಿಂಗಳಿಗೆ ನಾನು ಸಾಲಾ ತೆಗೆಯೋ ಪ್ರಸಂಗ ಬರುತ್ತಿರಲಿಲ್ಲ ನೋಡು. ನನ್ನಮ್ಮನ ಮಾತಂತೂ ಕೇಳುವ ಪ್ರಶ್ನೆಯೇ ಇಲ್ಲ. ಅವಳು ಏನೂ ಹೇಳುವುದಿಲ್ಲ. ಅವರಮ್ಮನೇ ಈ ಇವಳ ಅವತಾರವನ್ನು ನೋಡಿ ಬುದ್ಧಿ ಹೇಳಿದ್ದರೆ ಗೊತ್ತಿಲ್ಲ. ಇಲ್ಲಾ ಈ ಮಹಿಳಾ ಮಣಿಗಳದೇ ಹೊಸದೇನಾದರೂ ಕಾರ್ಬಾರ ಇರಬಹುದೇನೋ ಅನಿಸತ್ತೆ. ಟೀವಿಯಲ್ಲೆಲ್ಲಾ ಬರುತ್ತಲ್ಲಾ ಈಗ ಅಡುಗೆ ಕಾರ್ಯಕ್ರಮ ನಳಪಾಕ ಅಭಿರುಚಿ ಭೋಜನ ಅಂತೆಲ್ಲಾ ಅದರ ತಯಾರಿ ಇದ್ದರೂ ಇರಬಹುದು. ನೆರೆಮನೆಯ ಲಲನಾಮಣಿ ಬಂದು ಏನೋ ಗುಸುರು - ಫುಸುರು ಮಾಡಿದ್ದನ್ನ ಕೇಳಿದ್ದೆ. ಆದರೆ ಸವಿತಾ ಅದರ ಬಗ್ಗೆ ಅಷ್ಟು ಆಸ್ಥೆ ತೋರಿಸಿರಲಿಲ್ಲ. ಏನೋ ಮನೆಯಲ್ಲಂತೂ ಅಚ್ಚ ಸಾಂಪ್ರದಾಯಿಕ ಶುದ್ಧ ರುಚಿ ಶುಚಿ ಅಡುಗೆ ಸ್ವಾದ ಸಿಗುತ್ತಿದೆ. ಮೊದಲಿನ ಹಾಗೆ ಗುಜರಾತಿ ಪಂಜಾಬಿ ಟೇಸ್ಟಿನ ಊಟ ಅಲ್ಲ. ದುಡ್ಡನ್ನೂ ಈಗ ಅಷ್ಟಾಗಿ ಕೇಳುತ್ತಿಲ್ಲ. ಹಾಗಂತ ಖುಷಿಯಾಗೇ ಇದ್ದಾಳೆ. ಏನೋ ಹೇಳಲರಿಯದ ಹೊಸ ಕಳೆ ಬಂದಿದೆ ಮನೆಗೆ'. ಎಂದು ಸಂತೋಷದಿಂದ ವರದಿ ಒಪ್ಪಿಸಿದ ಸುಧೀರ.

ಇದನ್ನು ಕೇಳಿ ಶ್ರೀಧರನಿಗೂ ಸಂತೋಷವೇನೋ ಆಯಿತು. ಆದರೆ ಹಠಾತ್ತನೇ ಬದಲಾದ ಹೆಂಡತಿಯನ್ನು ಗೆಳೆಯ ಕೇಳಬಹುದಿತ್ತಲ್ಲ. ಇದರ ಹಿಂದಿನ ರಹಸ್ಯವೇನೆಂದು ಎಂದೆನಿಸಿದರೂ ಸುಧೀರನ ಸ್ವಭಾವ ಗೊತ್ತಿದ್ದರಿಂದ 'ಒಳ್ಳೆಯದಾಯಿತು ಬಿಡು. ಒಟ್ಟಿನಲ್ಲಿ ನಿನ್ನ ಸಂಸಾರ ಚೆನ್ನಾಗಿದ್ದು ನೀನು ನಗುನಗುತಾ ಇದ್ದರೆ ಸಾಕು' ಎಂದು ಹಾರೈಸಿದ. ಅದನ್ನು ಕೇಳಿ ಸುಧೀರನ ಮೊಗದಲ್ಲೂ ಮೀಸೆಯಡಿಯಲ್ಲಿ ಹೂ ನಗೆ ಮಿಂಚಿತ್ತು.

'ರೀ ಅಕ್ಕಪಕ್ಕದವರೊಟ್ಟಿಗೆ ಪೇಟೆಗೆ ಹೋಗಬೇಕು ಅಂತಿದಿನಿ. ಸ್ವಲ್ಪ ದುಡ್ಡು ಬೇಕಿತ್ತು' ಎಂದು ಮದುವೆಯಾದ ಹೊಸತರಲ್ಲಿ ಮೊದಲ ಬಾರಿಗೆ ಹೆಂಡತಿ ನಾಚುತ್ತ ಕೆಂಪಾಗಿ ಮುಜುಗರದಿಂದ ಕೇಳಿದಾಗ ಅಯ್ಯೋ ಪಾಪ ಎನಿಸಿ ಏನೊಂದೂ ಕೇಳದೆ ಹಣ ಕೊಟ್ಟಿದ್ದ ಸುಧೀರ. ಹಳ್ಳಿಯಿಂದ ಬಂದವಳು ಎಲ್ಲರೊಡನೆ ಒಡನಾಡಿ ಚುರುಕಾಗಲಿ ಎಂದು ಭಾವಿಸಿದ. ಮೊದಮೊದಲು ಅವಳಲ್ಲಾದ ಬದಲಾವಣೆಗಳನ್ನು ಕಂಡು ತನ್ನ ಮಡದಿಯೂ ಯಾವ ಹೀರೋಯಿನ್‌ಳಿಗೆ ಕಮ್ಮಿಯಿಲ್ಲ ಎಂದು ಗರ್ವ ಪಟ್ಟ. 'ರೀ ಎಲ್ಲಾದರೂ ಸುತ್ತಾಡಿ ಬರೋಣ' ಎಂದು ಹೆಂಡತಿ ಹೇಳಿದಾಗ ತಾನು ಕೂಡ ಒಳ್ಳೆ ಹೀರೋ ಹಾಗೆ ತಯಾರಾಗಿ ಹೊರಡುತ್ತಿದ್ದ. ವಾರಾಂತ್ಯದಲ್ಲಿ ನಡೆಯುತ್ತಿದ್ದ ಸಿನೆಮಾ ಹೊಟೇಲ್ ಸುತ್ತಾಟ ಎಲ್ಲ ವೀಕ್‌ಡೇನಲ್ಲೂ ಶುರುವಾಯಿತು. ಬಟ್ಟೆ ಬರೆಗಳ ವಿನ್ಯಾಸ ಕೂಡ ಬದಲಾಯಿತು. ಸೀರೆ ಹೋಗಿ ಚೂಡಿದಾರ ಬಂತು. ಹೀಗೇ ಮುಂದುವರಿದು ಇನ್ನೇನೇನೋ ಆಯಿತು. ಮನೆ ಅಡುಗೆಗೆ ಆಫೀಸ್ ಊಟದ ಡಬ್ಬಾ ಇವುಗಳಿಗೂ ರಜಾ ಹೆಚ್ಚಾಯಿತು. ಹಳ್ಳಿ ಹುಡುಗಿಯ ಪೇಟೆ ನಂಜು ಏರುತ್ತಲೇ ಹೋಯಿತು. ಗೆಳೆಯ ಶ್ರೀಧರನ ಸಲಹೆ ಸೂಚನೆಗಳನ್ನು ಪಾಲಿಸುವುದು ಅಳವಡಿಸುವುದು ಮೃದು ಸ್ವಭಾವದ ಸುಧೀರನಿಗೆ ಕಷ್ಟಸಾಧ್ಯವಾಗುತ್ತಿತ್ತು. ಇತ್ತ ಜೇಬು ಮಾತನ್ನು ನಿಲ್ಲಿಸುವ ಸೂಚನೆ ಕೊಡುತ್ತಿತ್ತು. ಎಷ್ಟು ಬಡಿದರೂ ಶಬ್ದ ಕೇಳಿಸುವಂತಿರಲಿಲ್ಲ. ಸಾಲದ್ದಕ್ಕೆ ಗೌರಿ ಗಣೇಶ ಹಬ್ಬದ ಸಡಗರ ಬೇರೆ ಎದುರು ನೋಡುತ್ತಿತ್ತು. ಹೀಗೇ ನಡೆದರೆ ಸಾಲವೇ ಗತಿ ಎಂದು ಸುಧೀರ ಖಿನ್ನನಾದ. ಅಷ್ಟಾದರೂ ಹೆಂಡತಿಗೆ ಬುದ್ಧಿ ಹೇಳಿ ಅವಳನ್ನು ತಿದ್ದುವ ಧೈರ್ಯ ಈ ಗಂಡನಿಗಿರಲಿಲ್ಲ.

ಗಂಡು ಮಕ್ಕಳಿಲ್ಲದ ನಾರಾಯಣ ರಾಯರ ಎರಡನೇ ಮಗಳೇ ಸುಧೀರನ ಹೆಂಡತಿ ಸವಿತಾ. ಚಿಕ್ಕಿಂದಿನಿಂದಲೂ ಬಲು ಚೂಟಿ ಹುಡುಗಿ. ರಾಯರ ಮುದ್ದಿನ ಮಗಳು ಕೂಡ. ಕೆಲಸದಲ್ಲಿ, ಕಲಿಯುವುದರಲ್ಲಿ ಎಲ್ಲ ಮುಂದು. ನೆರೆಹೊರೆಯವರಿಗೂ ಸವಿತಾಳನ್ನು ಕಂಡರೆ ತುಂಬಾ ಅಕ್ಕರೆ. ಅವರಲ್ಲಿ ಯಾರೇ ನೆಂಟರಿಷ್ಟರು ಬಂದರೂ ಸವಿತಾಳನ್ನು ಮಾತಾಡಿಸದೆ ಇರುತ್ತಿರಲಿಲ್ಲ. ಅದರಲ್ಲೂ ಪೇಟೆ ಕಡೆಯ ಜನ ಬಂದರೆ ಸವಿತಾ ಹೆಚ್ಚು ಕಾಲ ನೆರೆಮನೆಯಲ್ಲಿಯೇ ಕಳೆಯುತ್ತಿದ್ದಳು. ಅವರೊಟ್ಟಿಗೆ ತಾನೂ ಒಬ್ಬಳಾಗಿ ಬಿಡುತ್ತಿದ್ದಳು. ಅವರ ಮಾತು ನಡೆನುಡಿಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಳು. ಮನೆಗೆ ಬಂದು ಅದೇ ರೀತಿ ಪೇಟೆ ಸ್ಟೈಲಲ್ಲಿ ಅವರಂತೆ ಹಾವಭಾವ ಮಾಡುತ್ತಾ ಮಾತನಾಡುತ್ತಿದ್ದಳು. ತಾನೂ ದೊಡ್ಡವಳಾದ ಮೇಲೆ ಪೇಟೆಗೆ ಹೋಗುವುದಾಗಿ ಆಗಿನಿಂದಲೇ ಹೇಳುತ್ತಿದ್ದಳು. ರಾಯರೋ, ಅಕ್ಕಪಕ್ಕದ ಸ್ಥಿತಿವಂತರ ಮಧ್ಯೆ, ಸಣ್ಣ ಅಡಿಕೇ ತೆಂಗಿನ ಬಾಗಾಯತದಲ್ಲಿ, ಸ್ವಂತ ದುಡಿದು ಬಂದ ಆದಾಯದಲ್ಲೇ ತಮ್ಮ ಸಂಸಾರವನ್ನು ತಕ್ಕಮಟ್ಟಿಗೆ, ಹೆಂಡತಿ ಮೂರುಜನ ಹೆಣ್ಣು ಮಕ್ಕಳೊಂದಿಗೆ ಮರ್ಯಾದೆಯಿಂದ ಸಾಗಿಸುತ್ತಿದ್ದರು. ದೊಡ್ಡವಳಾಗುತ್ತಿದ್ದಂತೆ ಸವಿತಾ ಮನೆಕೆಲಸಕ್ಕೆ ಕಳ್ಳ ಬೀಳುವ ವಿದ್ಯೆಯನ್ನು ಕಲಿಯತೊಡಗಿದಳು. ತನಗೆ ಹೇಳಿದ ಕೆಲಸಗಳನ್ನು ಹಿರಿಯಕ್ಕನಿಗೆ ವಹಿಸಿ ಪರಾರಿಯಾಗುತ್ತಿದ್ದಳು.

ಒಂದು ದಿನ ಇದ್ದಕ್ಕಿದ್ದಂತೆ ಸವಿತಾ ತನ್ನ ಗೆಳತಿಯರೆಲ್ಲಾ ಗೌರಿ ಗಣೇಶನ ಹಬ್ಬಕ್ಕೆ ಊರಿಗೆ ಹೋಗುತ್ತಿದ್ದಾರೆ ತಾನೂ ಕೂಡ ನಾಲ್ಕು ದಿನದ ಮಟ್ಟಿಗೆ ಊರಿಗೆ ಹೋಗಿ ಬರುತ್ತೇನೆಂದು ಗಂಡನಲ್ಲಿ ಇಚ್ಛೆ ವ್ಯಕ್ತಪಡಿಸಿದಳು. ಗೆಳೆಯ ಶ್ರೀಧರನಿಂದಲೂ ಇದೇ ಸಲಹೆ ಸಿಕ್ಕಿತ್ತು ಸುಧೀರನಿಗೆ. ಹಾಗಾಗಿ ಸಂತೋಷದಿಂದ ಒಪ್ಪಿಗೆಯಿತ್ತು ಕೂಡಲೇ ಊರಿಗೆ ಹೋಗುವ ಬಸ್ ಟಿಕೇಟನ್ನು ತಂದು ಅವಳ ಕೈಗಿತ್ತ. ಸದ್ಯ ಗಗನ ಹಾರುತ್ತಿದ್ದ ಇವಳು ಅಂಗಳಕ್ಕಿಳಿದರೆ ಸಾಕು ಎನ್ನುವಂತಾಗಿತ್ತು ಸುಧೀರನ ಸ್ಥಿತಿ.

ಸವಿತಾಳಿಗೋ ಊರಿಗೆ ಹೋಗುವ ಸಂಭ್ರಮವೇ ಸಂಭ್ರಮ. ಮೊದಲ ಬಾರಿಗೆ ಪೇಟೆ ಲೈಫ್‌ನಿಂದ ತನ್ನ ಹಳ್ಳಿ ಊರಿಗೆ ಹೋಗುತ್ತಿದ್ದ ಅನುಭವ. ಥಳಕು ಬಳುಕಾಗಿ ಪೇಟೆ ಸ್ಟೈಲ್‌ನಲ್ಲಿ ಹೋಗಬೇಕೋ ಅಥವಾ ಸಿಂಪಲ್ ಆಗಿ ಹೋಗಲೋ ಎಂಬ ವಿಚಾರ ಬಂದಾಗ ಸುಧೀರನನ್ನು ಕೇಳೋಣ ಅಂದುಕೊಂಡಳು. ವೈಯ್ಯಾರದಿಂದ 'ರೀ ನಾನು ಊರಿಗೆ ಸಿಂಪಲ್

ಸ್ಟೈಲ್‌ನಲ್ಲಿ ಹೋಗಲೋ ಪೇಟೆ ಸ್ಟೈಲ್‌ನಲ್ಲಿ ಹೋಗಲೋ' ಅಂದಳು. ಸಿಂಪಲ್ ಆಗಿ ಹೋಗು ಎಂದು ಕೂಗಿ ಹೇಳಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡರೂ 'ನಿನ್ನಿಷ್ಟ' ಎಂದು ಹೇಳಿ ಜಾಗ ಖಾಲಿ ಮಾಡಿದ್ದ ಸುಧೀರ. ಗಂಡನನ್ನು ಅರ್ಥ ಮಾಡಿಕೊಳ್ಳುವ ಮನೋಭಾವ ಆಗಲೂ ಅವಳಲ್ಲಿ ಮೂಡಿರಲಿಲ್ಲ. ನಂತರ ಹೆತ್ತವರ ಮರ್ಯಾದೆ ಇಡುವಂತೆ ಹೊರಟು ನಿಂತ ಹೆಂಡತಿಯನ್ನು ಕಂಡು ಸಮಾಧಾನಪಟ್ಟಿದ್ದ. ಮದುವೆಗೆ ಮುಂಚಿಯೇ ಶ್ರೀಧರ ತನಗೆ ಸಲಹೆ ನೀಡಿದ್ದನ್ನು ಒಮ್ಮೆ ನೆನಪಿಸಿಕೊಂಡ. 'ಸುಧೀರ ನೀನು ಸಾಧು ಸ್ವಭಾವದವನು, ಒಂದೇ ಉದ್ಯೋಗದಲ್ಲಿದ್ದ ಬಡ ಹುಡುಗಿಯನ್ನು ಮದುವೆಯಾಗು, ಇಲ್ಲ ಸ್ವಲ್ಪ ಸ್ಥಿತಿವಂತರ ಮನೆಯ ಹೆಣ್ಣನ್ನು ಕಟ್ಟಿಕೋ, ಪ್ರಸಂಗ ಬಂದರೆ ನಿನ್ನ ಕಷ್ಟ ಸುಖಕ್ಕೆ ಆದಾರು' ಎಂದು. ಆದರೆ ಅನುಭವಿ ತಾಯಿ, ಅಣ್ಣ, ಅತ್ತಿಗೆಯರ ವಿಚಾರವೂ ಆಗ ಒಂದು ನಿಟ್ಟಿನಲ್ಲಿ ತಪ್ಪಾಗಿ ಕಾಣಿಸಿರಲಿಲ್ಲ. ಅವನಿಗೆ ಬರೀ ಗ್ರಾಜುಯೇಟಾಗಿ ಸಣ್ಣ ಉದ್ಯೋಗದಲ್ಲಿರುವ ಈ ಬಡಹುಡುಗನಿಗೆ ಯಾವ ಸ್ಥಿತಿವಂತರು ಹೆಣ್ಣು ಕೊಟ್ಟಾರು? ಹೆಣ್ಣಿನದೇ ಬರ ಇರುವ ಈ ಸಮಯದಲ್ಲಿ ಉದ್ಯೋಗಸ್ಥ ಹುಡುಗಿ ಸಿಗುವುದಂತೂ ದೂರಿನ ಮಾತು. ಹೀಗಿರುವಾಗ ತಮ್ಮ ಅಂತಸ್ತಿನ ಬಡವರ ಮನೆಯ ಅಕ್ಷರಸ್ಥ ಹುಡುಗಿ. ತೋಟ, ಮನೆಕೆಲಸ ತಿಳಿದವಳು, ಒಳ್ಳೆಯ ಮನೆತನ ಎಂದು ನಾರಾಯಣರಾಯರ ಮಗಳನ್ನು ತಂದು ಸುಧೀರನಿಗೆ ಮದುವೆ ಮಾಡಿದ್ದರು. ಈಗ ಯಾವುದನ್ನೂ ವಿಚಾರಮಾಡಿ ಪ್ರಯೋಜನವಿಲ್ಲ. ಊರಿಂದ ಬಂದ ಮೇಲೂ ಅವಳು ಹೀಗೆ ನಡೆದುಕೊಂಡರೆ ನಾಲ್ಕು ಜನರೆದುರು ಸರಿಯಾಗಿ ಬುದ್ಧಿ ಹೇಳುವ ಪ್ರಯತ್ನ ಮಾಡಿದರಾಯಿತು ಎಂದೆಣಿಸಿದ.

'ಚಿಕ್ಕಮ್ಮ ನಿನ್ನನ್ನು ಕೇಳಿಕೊಂಡು ಯಾರೋ ಬಂದಿದ್ದಾರೆ' ಎಂದು ಅಕ್ಕನ ಮಗ ಆದಿತ್ಯ ಕೂಗಿದಾಗ, ಅಡುಗೆ ಮನೆಯಿಂದ ಕೈ ಒರೆಸಿಕೊಳ್ಳುತ್ತ 'ಯಾರೋ' ಎಂದು ಕೇಳುತ್ತ ಬಂದ ಲಕ್ಷ್ಮೀಗೆ 'ನಂಗೊತ್ತಿಲ್ಲ. ಯಾರೋ ಘಾಟಿ ಆಂಟಿ ಬಂದಿದ್ದಾರೆ ನೀನೇ ನೋಡು ಹೋಗು' ಎನ್ನುತ್ತಾ ಒಳಗೋಡಿದ. ಆ ಮಾತು ಸವಿತಾಳ ಕಿವಿಗೂ ಬಿದ್ದಿತ್ತು. ಯಾರೆಂದು ಲಕ್ಷ್ಮಿಗೂ ಒಂದು ಕ್ಷಣ ಗುರುತು ಸಿಕ್ಕಲಿಲ್ಲ. 'ಲಕ್ಷ್ಮೀ ನಾನು ಸವಿತಾ ನಿನ್ನ ಗೆಳತಿ' ಎಂದಾಗ 'ಅರೆ ಹೌದಲ್ವಾ ಬಾ ಕೂತ್ಕೊ ಇದೇನೇ ನಿನ್ನ ಅವತಾರ ಎಷ್ಟು ಚೇಂಜಾಗಿದ್ದೀಯಾ, ಗುರುತೇ ಸಿಗದ ಹಾಗೆ' ಎಂದು ಲಕ್ಷ್ಮೀ ತನ್ನ ಅನಿಸಿಕೆಯನ್ನು ತೋರ್ಪಡಿಸಿದಳು. ಅದಕ್ಕೆ ಸವಿತಾ ಗರ್ವದಿಂದ 'ನಾನೀಗ ಮೊದಲಿನ ಹಾಗೆ ಹಳ್ಳಿಯಲ್ಲಿಲ್ಲ ಪೇಟೇಲಿದ್ದೀನಿ ತೀಳೀತ' ಎಂದು ಸಮರ್ಥಿಸಿಕೊಂಡದ್ದನ್ನು ಕೇಳಿ ಲಕ್ಷ್ಮೀಗೆ ನಗು ತಡೆಯಲಾಗಲಿಲ್ಲ. 'ಅಲ್ಲ ನೀನು ಪೇಟೆಯಲ್ಲಿರುವವರ ಹಾಗೆ ಕಂಡಿದ್ದರೆ ಸಲೀಸಾಗಿ ನಾನು ನಿನ್ನ ಮಾತಾಡಿಸುತ್ತಿದ್ದೆ. ಹಾಗ್ಯಾಕೆ ಕೇಳ್ತಿದ್ದೆ ಹೇಳು? ಒಳ್ಳೆ ಯಕ್ಷಗಾನದಲ್ಲಿ ಗಂಡಸು ಹೆಣ್ಣು ವೇಷ ಹಾಕಿದ ಹಾಗೆ ನಿನ್ನ ಗೆಟಪ್ ಇದೆ. ನಿಮ್ಮಪ್ಪ ಅಮ್ಮ ಏನೂ ಅನ್ನಲಿಲ್ಲವೇನೇ?' ಎಂದು ಅಣುಕಿಸಿದ ಲಕ್ಷ್ಮೀಯನ್ನು ತಡೆದು 'ಅಲ್ಲ ನೀನು ಅಷ್ಟೇ ತಾಯಿ, ಅಮ್ಮನ ಮನೆಯಲ್ಲಿದ್ದಿಯ ಅಂತ ಗರತಿ ಗೌರಮ್ಮನ ಹಾಗೆ ಕೂತಿದಿಯ, ಶಹರದಲ್ಲಿ ಹೊರಗಡೆ ಹೋಗುವಾಗ ಎಷ್ಟು ಸಿಂಗರಿಸಿಕೊಳ್ಳುತ್ತಿಯೋ ಯಾರಿಗೆ ಗೊತ್ತು, ಯಾರು ನೋಡಿದ್ದಾರೆ ಹೌದೋ- ಅಲ್ಲವೋ' ಎಂದಳು ಸವಿತಾ. ಇದನ್ನು ಕೇಳಿ ಪರಿಸ್ಥಿತಿ ಏನೆಂದು ಅರ್ಥವಾಯಿತು ಲಕ್ಷ್ಮೀಗೆ.

ಮೊದಲಿನಿಂದಲೂ ಪೇಟೆಯ ಗೀಳನ್ನು ಹೊಂದಿದ್ದ ಇವಳು ಈಗ ಅದನ್ನು ಪೂರೈಸಿಕೊಳ್ಳುತ್ತಿದ್ದಾಳೆ ಎಂದರಿತ ಲಕ್ಷ್ಮೀಗೆ ಹಿಂದಿನ ದಿನಗಳು ನೆನಪಾದವು. ಗೆಳತಿಯರೆಲ್ಲ ಸೇರಿದಾಗ ಒಂದು ದಿನ ಹೀಗೆ ಮಾತನಾಡುತ್ತ ತಾವು ಮದುವೆಯಾದರೆ ಪೇಟೆಯವರನ್ನೆ ಮದುವೆಯಾಗಬೇಕು, ಪೇಟೆಯಲ್ಲಾದರೆ ಆರಾಮವಾಗಿ ಸುತ್ತಾಡಿಕೊಂಡಿರಬಹುದು, ಮಜವಾಗಿರಬಹುದು ಎಂದೆಲ್ಲ ಕನಸು ಕಂಡಿದ್ದೆವು. ಸವಿತಾಳೂ ಅಷ್ಟೆ ನೆರೆಯವರು ಇಲ್ಲಿ ಆರಾಮವಾಗಿ ಬಂದು ಹೋದದ್ದನ್ನು ನೋಡಿದ್ದಳೆ ಹೊರತು ಅಲ್ಲಿ ಅವರ ಜೀವನಕಥೆ ಕಂಡದ್ದಿಲ್ಲಾ, ಕೇಳಿದ್ದಿಲ್ಲಾ. ಹಾಗಾಗಿ ಪೇಟೆ ಜೀವನದ ಭೂತ ಅವಳಲ್ಲಿ ಹಾಗೆಯೇ ಉಳಿಯಿತು. ಮೇಲಾಗಿ ಹಟಮಾರಿ ಬೇರೆ. ಅವಳಿಗೆ ಸತ್ಯಸಂಗತಿಯನ್ನು ತಿಳಿ ಹೇಳೋಣ ಅಂದುಕೊಂಡಳು.

'ನೋಡು ಸವಿತಾ ನಾನು ನಿನ್ನ ಗೆಳತಿಯಾಗಿ ನಿನ್ನ ಒಳಿತಿಗಾಗಿ ಹೇಳುತ್ತಿದ್ದೇನೆ. ತಪ್ಪು ತಿಳಿಯಬೇಡಾ ನಿನ್ನ ಸಮಸ್ಯೆ ಏನೆಂದು ನನಗರ್ಥವಾಯಿತು. ನೀನು ತಿಳಿದ ಹಾಗೆ ನಾನು ಯಾವ ಶಹರದಲ್ಲೂ ವಾಸಿಸುತ್ತಿಲ್ಲ. ನೀನು ಮತ್ತೆ ವನಜಾ ಬಿಟ್ಟರೆ ನಾನು ಬಾಕಿಯೆಲ್ಲ ಗೆಳತಿಯರು ಹಳ್ಳಿಯವರನ್ನೇ ಮದುವೆಯಾಗಿದ್ದೇವೆ. ಅಡಿಕೆ ದರ ಬಿದ್ದು ವರದಕ್ಷಿಣೆ ಕಾಟ ಹೆಚ್ಚಾದ್ದರಿಂದ ನಾವೆಲ್ಲಾ ತಂದೆ - ತಾಯಿಯರಿಗೆ ನೋವಾಗದಿರಲೆಂದು ಹಳ್ಳಿಯವರನ್ನೇ ಮದುವೆಯಾಗುವುದೆಂದು ನಿರ್ಧರಿಸಿದ್ದೆವು. ಅದು ನಿನಗೂ ಗೊತ್ತು. ನಾವು ಈಗಲೂ ತುಂಬಾ ಸಂತೋಷದಿಂದ ಇದ್ದೇವೆ. ಆ ಪ್ರಶ್ನೆ ಬೇರೆ. ಆದರೆ ಮನೆಕೆಲಸ ತೋಟದ ಕೆಲಸ ಕಲಿಯದ ನೀನು ಪೇಟೆ ಗಂಡನೇ ಬೇಕೆಂದು ತಂದೆಗೆ ಖಡಾಖಂಡಿತವಾಗಿ ಹೇಳಿದ್ದೆ. ನೀನು ಹಟಮಾರಿ ಸ್ವಭಾವದಳೆಂದು ಗೊತ್ತಿದ್ದ ನಿನ್ನ ತಂದೆ ಕಷ್ಟಪಟ್ಟು ಪೇಟೆಯಲ್ಲಿ ಉದ್ಯೋಗದಲ್ಲಿದ್ದ ಹುಡುಗನನ್ನು ಹುಡುಕಿ ಮದುವೆ ಮಾಡಿದರು. ನನ್ನ ಅಕ್ಕ ಓರಗಿತ್ತಿಯರು ಎಲ್ಲರೂ ಶಹರದಲ್ಲೇ ಇರುವುದು. ಆದರೆ ಅವರ್ಯಾರು ನಿನ್ನ ತರಹ ಆಡಂಬರ ಮಾಡಿದ್ದನ್ನು ನಾನು ನೋಡಿಲ್ಲ. ಅಲ್ಲಿ ಕುಳಿತಿದ್ದಾಳಲ್ಲ ಅವಳು ನನ್ನಕ್ಕ. ನಾನು ಅವಳು ಸೇರಿ ವೀಳ್ಯದೆಲೆ ಹಾಕಿ ಜೋಡಿಸಿಟ್ಟು ಬರುವುದಕ್ಕೂ ನೀನು ಬರುವುದಕ್ಕೂ ಸರಿ ಹೋಯಿತು. ಮತ್ತೆ ಅವಳು ಮಡ್ಲನ್ನು ನೇಯಲು ಹೋದಳು, ನಾನು ನಿನ್ನೊಟ್ಟಿಗೆ ಕುಳಿತೆ. ನಮ್ಮ ಮನೆಯಲ್ಲೂ ಅಷ್ಟೆ ಎಲ್ಲರಿಗೂ ತೋಟದ ಕೆಲಸ ಬರುತ್ತೆ. ಶಹರದಲ್ಲಿ ಇದ್ದರೂ ಮನೆಗೆ ಬಂದಾಗ ಎಲ್ಲರೂ ಒಟ್ಟುಗೂಡಿ ಕೆಲಸ ಮಾಡುತ್ತಾರೆ. ನನ್ನ ಗಂಡನೂ ತುಂಬಾ ಕಲಿತವ. ಜಮೀನು ನೋಡಿಕೊಳ್ಳುವುದಕ್ಕೋಸ್ಕರ ಶಹರಕ್ಕೆ ಹೋಗಿಲ್ಲ ಅಷ್ಟೇ. ನಿನ್ನನ್ನು ನೋಡಿ ಕಮೆಂಟ್ಸ್ ಕೊಟ್ಟನಲ್ಲ ಅವನು ಈ ಅಕ್ಕನ ಮಗನೇ' ಎಂದು ಹೇಳುತ್ತಿದ್ದಂತೆ ಸವಿತಾಳ ಕಣ್ಣಲ್ಲಿ ನೀರು ಜಿನುಗುತ್ತಿದ್ದವು. ಅವಳಿಗೆ ತನ್ನ ತಪ್ಪಿನ ಅರಿವಾಗಿತ್ತು.

ಲಕ್ಷ್ಮೀಯನ್ನು ಬಿಗಿದಪ್ಪಿ ಕಣ್ಣೀರು ಸುರಿಸಿದಳು. ಅವಳನ್ನು ತಾನು ತಪ್ಪಾಗಿ ತಿಳಿದದ್ದಕ್ಕೆ ಕ್ಷಮೆ ಕೇಳಿದಳು. ತಾನು ತಂದೆಯವರಿಗೆ ಎಷ್ಟು ಕಾಟ ಕೊಟ್ಟೆನಲ್ಲಾ ಎಂದು ದುಃಖಿಸಿದಳು. ಒಡನೆಯೇ ಲಕ್ಷ್ಮೀ ಅವಳನ್ನು ಸಾಂತ್ವನ ಪಡಿಸುತ್ತಾ, ಮೇಕಪ್‌ನ ಬಣ್ಣದಿಂದ ಕೊಳೆಯಾದ ಮುಖ ತೊಳೆದುಕೊಂಡು ಬರುವಂತೆ ಹೇಳಿದಳು. ಸವಿತಾ ಸಾವರಿಸಿಕೊಂಡ ಮೇಲೆ ಲಕ್ಷ್ಮೀ ಪುನಃ ಅವಳಲ್ಲಿ ಚೈತನ್ಯ ತುಂಬುವ ಪ್ರಯತ್ನ ಮಾಡಿದಳು. 'ನೀನು ಇಷ್ಟೊಂದು ಕೊಸ್ಮೆಟಿಕ್ಸ್ ಉಪಯೋಗಿಸುತ್ತಿರುವೆ ಎಂದು ನಿನ್ನ ಗಂಡನಿಗೆ ಗೊತ್ತಿದೆಯ? ನೀನು ಉಪಯೋಗಿಸುತ್ತಿರುವುದು ಒಳ್ಳೆ ಗುಣಮಟ್ಟದ ಬಣ್ಣಗಳಲ್ಲ. ನೋಡು ಸ್ವಲ್ಪ ನೀರು ತಾಗಿದರೂ ಹೇಗೆ ಒಂದಕ್ಕೊಂದು ಒಟ್ಟುಗೂಡಿದವು. ಲಕ್ಷಣವಾದ ಮುಖವನ್ನು ಯಾಕೆ ಅಂದಗೆಡಿಸಿಕೊಳ್ಳುತ್ತಿಯ? ಸುಧೀರ ಇದರ ಬಗ್ಗೆ ಏನೂ ಹೇಳುತ್ತಿರಲಿಲ್ಲವೇನು?' 'ಅವರು ನಾನು ಏನೂ ಮಾಡಿದರೂ ಏನೂ ಹೇಳುತ್ತಿರಲಿಲ್ಲ. ಆದರಿಷ್ಟೇ ಮೊದ ಮೊದಲು ಹಣ ಕೇಳಿದಾಗ ಪ್ರೀತಿಯಿಂದ ಕೊಡುತ್ತಿದ್ದರು. ಇತ್ತೀಚೆಗೆ ಕೇಳಿದ್ದಕ್ಕಿಂತ ಸ್ವಲ್ಪ ಕಡಿಮೆ ಹಣ ಕೊಡುತ್ತಿದ್ದರು. ಆ ದಿನ ಊರಿಗೆ ಬರುವಾಗ ಪೇಟೆ ಡ್ರೆಸ್ ಹಾಕಲೋ ಅಂತ ಕೇಳಿದರೆ ನಿನ್ನಿಷ್ಟ ಎಂದಷ್ಟೇ ಹೇಳಿ ಅಲ್ಲಿಂದ ಎದ್ದು ಹೋಗಿದ್ದರು. ನಾನವರನ್ನು ಅರ್ಥ ಮಾಡಿಕೊಳ್ಳಲೇ ಇಲ್ಲ' ಎಂದು ಸವಿತಾ ತನ್ನ ಮೂರ್ಖತನವನ್ನು ಒಪ್ಪಿಕೊಂಡಳು. ಮತ್ತೆ ಲಕ್ಷ್ಮೀ ಅವಳ ಮನೆ ಮಠಗಳ ಬಗ್ಗೆ ವಿಚಾರಿಸಿದಳು. ಎರಡು ಕೋಣೆಯ ಆ ಪೇಟೆಮನೆ. ಆಚೀಚೆ ಇರುವವರು ವ್ಯಾಪಾರಿ ಕುಟುಂಬ. ಸವಿತಾ ಎಂದೂ ತನ್ನ ಗಂಡನ ಉದ್ಯೋಗ ಏನು, ಸಂಬಳ ಎಷ್ಟು, ಏನೊಂದನ್ನೂ ಕೇಳಿರಲಿಲ್ಲ. ಪೇಟೆಯ ಐಷಾರಾಮದ ಜೀವನ ಮಾತ್ರ ಅವಳನ್ನು ಆಕರ್ಷಿಸಿತ್ತು. ಲಕ್ಷ್ಮೀಯ ಬಾಯಿಂದ ಹಳ್ಳಿಯ ಜೀವನದ ಸ್ವಾದವನ್ನು ಕೇಳಿ ಸವಿತಾಳಿಗೆ ಅಸೂಯೆ ಉಂಟಾಯಿತು. ತನಗೂ ಇಂಥದೇ ಸಂಬಂಧ ಕೂಡಿ ಬಂದಿತ್ತು. ತಂದೆ ಯಾವ ಪರಿಯಲ್ಲಿ ಹೇಳಿದರೂ ತಾನು ಅದಕ್ಕೆ ಒಪ್ಪಿರಲಿಲ್ಲ. ಹೀಗೆ ಒಂದೊಂದು ಘಟನೆಯನ್ನು ನೆನಪಿಸಿಕೊಂಡು ಸವಿತಾ ಪಶ್ಚಾತ್ತಾಪ ಪಟ್ಟಳು. ಗೆಳತಿ ಲಕ್ಷ್ಮೀಯಿಂದ ಸುಖ ಸಂಸಾರದ ಸುಸೂತ್ರ ಸೂತ್ರಗಳನ್ನು ಕಲಿತು ಸಂತೋಷದಿಂದ ಮನೆಗೆ ತೆರಳಿದಳು.

CHANGE OF ADDRESS

No.	OLD	NEW
LM/1512	Joshi C. M. Khargar	B - 401, Yashaskaram, Plot No. 39, Sector - 27, Kharghar, Navi Mumbai - 410 210.
LM/809	Ganapati Shankarling Bengaluru	Flat - 16, Staff Quts, ICT, Fafiahmeal Kidwai Road, Matunga, Mumbai - 400 019.
LM/873	Hegde L.G. Ayre Road, Dombivli (E)	Flat No. 4, Suryavihar CHS, R.N. 14, Milap Nagar, Nr. AIMS Hospital, MIDC, Dombivli (E) - 421 203.
LM/187	Ramakrishna Bhat T. Bandra (W), Mumbai - 400 050.	'Gokula' Kemmai, Chikkamudur Post, Puttur D. K. Karnataka - 574 203.
LM/1352	Hegde Sudha K. Virar (E) - 401 303.	002, Bldg 4, Vasudev Complex, Baverly Park, Mira Road (E) Thane - 401 107.
PT/104 LM/1397	Shastri R. M. Shastri Shanta, Aster, Regency Estate, Dombivli (E).	Flat No. 702, Bld, 20A, ACACIA, Regency Estate, Kalyan Shil Road, Dombivli (E) - 421 203.
LM/799	Gajanan A. Hegde Sirsi	B - 101, Shree Ganesh Bhavana CHS Szikpur, New Panvel, Raigad - 400 701.
LM/1094	Hegde N. T. Manipal	Flat No. 501, Penta Heights, V. P. Nagar, Indrali, Udupi, D. K. Karnataka - 576 102.
LM/46	Hegde R. V. Bengaluru - 560 062.	702, Shree Siddivinayaka Mahima CHS Sector - 19, New Panvel - 410 206.
LM/193	Hegde G. N. Bhandup.	M. 201, Yash Paradise, Sector - 8, Airoli, Navi Mumbai - 400 708.
PT/78	Bhagwat S. T. Bandra, MIG Colony.	Flat - 1006, 10th Floor, A - Wing, New Vinay CHS, Kalina, Santacruz (E), Mumbai - 98.
LM/867	Hegde G. S. Somani Marg, Mumbai - 400 005	203, Shivala, Katau Road, Colaba, Mumbai - 400 005.

NEW MEMBERS

No.	Name & Address	Native	Phone / Email
PT/127	Bhat Ramana S. H - 210, 4th Floor, Mulund Darshan, Mulund Colony, Mumbai - 400 082.	Siddhamule Puttur	9820158256 022 - 25670997
LM/1525	Hegde Nagendra Kursemane, P. O. Janmane, Sirsi, U. K. Karnataka - 581 315.	Kursemane Janmane, Sirsi	
LM/1526	Hegde Parameshwar G. Mudare, P. O. Hosakuli, Honnavar, U. K. Karnataka - 581 334.	Mudare Hosakuli Honnavar	9480680459
LM/1527	Hegde Girish Kumar G. 201, Bhoomi Colossa II, Sect - 13, Opp. Scholor School, Airoli - 400 708.	Kodgadde Nanikatta Siddapur	9819771048
LM/1528	Hegde Venumadhav V. C-4, 604, Kunal Icon, Rakshak CHS, Pimple Soudagar, Aundh Camp, Pune - 411 027.	Kerekai Haldota, Sirsi	9371839958

ಚುಟುಕು ಸಾಹಿತ್ಯದಲ್ಲಿ ವಿಶೇಷ ಸ್ಥಾನ ಪಡೆದ ಕವಿ, ಸಾಹಿತಿ, ವಿಡಂಬಾರಿಯವರ ಸನ್ಮಾನ

ಕೆರೆಮನೆಯವರ ಕಾರ್ಯಕ್ರಮದಲ್ಲಿ ಅವರ ಭಾಷಣ

'ಜೇಷ್ಠವೂ ಶ್ರೇಷ್ಠವೂ ಪರಮ ಪವಿತ್ರವೂ ಆದ ಈ ವೇದಿಕೆಯ ಮೇಲೆ ಕುಳಿತ ಮಹಾನುಭಾವಿ ವಿದ್ವಾಂಸರಿಗೆ ಮತ್ತು ಸಭೆಯಲ್ಲಿ ಕುಳಿತ ಕಲಾಭಿಮಾನಿ ಕಲಾ ಪೋಷಕರಿಗೆ ನಾನು ಮೊದಲು ತಲೆಬಾಗಿ ವಂದಿಸುತ್ತೇನೆ.

ನಾನು ಯಾವುದೇ ಕಲೆಗಳಲ್ಲಿಯೂ ಹೇಳಿಕೊಳ್ಳುವಷ್ಟು ಎತ್ತರಕ್ಕೆ ಬೆಳೆದವನಲ್ಲ. ಕಲಿತವನೂ ಅಲ್ಲ. ನಾನೇನಾದರೂ ಕಲಿತದ್ದು ಇದ್ದರೆ ಅದು ಹಿರಿಯ ವಿದ್ವಾಂಸರ ಒಡನಾಟದಿಂದ, ಆತ್ಮೀಯ ಸ್ನೇಹಿತರಿಂದ ಮತ್ತು ನನ್ನದೇ ಆದ ಬದುಕೆಂಬ ಪಾಠಶಾಲೆಯಲ್ಲಿ ಮಾತ್ರ.

ನನ್ನ ಹುಟ್ಟೂರು ಇಲ್ಲಿಯೇ ಹತ್ತಿರದ ಇಡಗುಂಜಿ. ಇಲ್ಲಿಯೇ ಗುಣವಂತೆಯಲ್ಲಿಯೂ ಕೂಡ ನನಗೆ ಹತ್ತಿರದ ಸಂಬಂಧಿಕರು ಇದ್ದಾರೆ. ಹೀಗಾಗಿ ಒಂದು ಕಾಲದಲ್ಲಿ ನನಗೆ ಕೆರೆಮನೆಯೆಂಬುದು ನೆರೆಮನೆಯೇ ಆಗಿತ್ತು. ಕೆರೆಮನೆ ಕುಟುಂಬ ಇಡಗುಂಜಿ ಮಾವಿನಕೆರೆ ಗಜಾನನ ಯಾಜಿ ಅವರ ಕುಟುಂಬ. ಇಡಗುಂಜಿಯ ಕೊಳ್ಳಿಳ್ಳಿ ಸೀತಮ್ಮ ಅವರ ಕುಟುಂಬ - ಈ ಮೂರು ಕುಟುಂಬದವರಿಗೆ ನನ್ನಲ್ಲಿ ಅಂಥದ್ದೇನು ಕಂಡಿತ್ತೋ ಗೊತ್ತಿಲ್ಲ. ನನ್ನನ್ನು ಒಬ್ಬ ಮನೆಯ ಸದಸ್ಯನಂತೆಯೇ ಪ್ರೀತಿಯಿಂದ ಅವರೆಲ್ಲರೂ ಕಾಣುತ್ತಿದ್ದರು.

ನಾನು ಅಂಕೋಲಾದ ಅಂಚೆ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಚುಟುಕು ಸಾಮ್ರಾಟ ಡಾ. ದಿನಕರ ದೇಸಾಯಿ ಅವರು ತಮ್ಮ ಮನೆಗೆ ಕರೆದು ಚುಟುಕು ಬರೆಯುವ ಕಲೆಯನ್ನು ತಿಳಿಸಿ ಹರಸಿ ನನ್ನನ್ನು ನಾಲ್ಕು ಜನರು ಗುರುತಿಸಲು ಕಾರಣರಾದರು. ಈ ಮಹಾನುಭಾವಿಗಳೆಲ್ಲರ ಒಡನಾಟ ನನ್ನನ್ನು ಒಬ್ಬ ಮನುಷ್ಯನನ್ನಾಗಿ ರೂಪಿಸಿತ್ತು. ಈ ಮಹದುಪಕಾರವನ್ನು ನಾನೆಂದಿಗೂ ಮರೆಯಲಾರೆ.

ಯಕ್ಷಗಾನ, ನಾಟಕ ಈ ಮಹಾನ್ ಕಲೆಗಳಲ್ಲಿ ನನಗೆ ಅಪಾರ ಆಸಕ್ತಿ ಇತ್ತಾದರೂ, ನನ್ನ ಬದುಕಿನ ಜಂಜಡಗಳಿಂದಾಗಿ ಆಳವಾಗಿ ಅಭ್ಯಾಸ ಮಾಡಲು ನನ್ನಿಂದ ಸಾಧ್ಯವಾಗಲಿಲ್ಲ. ಆದರೂ ಕೂಡ ಈ ನನ್ನ ನಂಬಿಕೆಯ ಶ್ರೇಷ್ಠವೂ ಜೇಷ್ಠವೂ ಪರಮ ಪವಿತ್ರವೂ ಆದ ಈ ವೇದಿಕೆಗೆ ನನ್ನನ್ನು ಕರೆದು ನನ್ನ ಹುಟ್ಟನ್ನು ಸಾರ್ಥಕಪಡಿಸಿದ್ದೀರಿ ತಮಗೆ ಕೋಟಿ ಕೋಟಿ ವಂದನೆಗಳು.

ತಾವು ನೀಡಿರುವ ಈ ಸನ್ಮಾನವನ್ನು ಮಹಾಪ್ರಸಾದವೆಂದು ತಿಳಿದು ಗೌರವದಿಂದ ಪಡೆದಿದ್ದೇನೆ. ನನಗೆ ಈ ಯಕ್ಷಗಾನ ನೋಡುವ ಕೇಳುವ ಆಸಕ್ತಿ ಎಷ್ಟಿತ್ತೆಂದರೆ ಕೆರೆಮನೆ ಮೇಳದ ಯಕ್ಷಗಾನಕ್ಕಾಗಿ ಇಡಗುಂಜಿಯಿಂದ ಮುರ್ಡೇಶ್ವರಕ್ಕೆ ನಡೆದುಕೊಂಡೇ ಹೋಗುತ್ತಿದ್ದೆ. ಇಂದಿನ ಹಾಗೆ ಅಂದು ವಾಹನ ಸೌಕರ್ಯವೂ ಇರಲಿಲ್ಲ. ಆದರೂ ಹೋಗುತ್ತಿದ್ದೆ. ಅದೂ ಕೆರೆಮನೆ ಮೇಳದ ಯಕ್ಷಗಾನಕ್ಕಾಗಿ. ಆದರೆ ಕೆರೆಮನೆ ಮೇಳ ನಿಂತ ನಂತರ ವೃತ್ತಿ ಮೇಳದ ಆಟಕ್ಕೆ ಹೋಗಲಿಲ್ಲ. ಹೋಗಬೇಕೆಂದು ಅನಿಸಲೂ ಇಲ್ಲ. ಇಂದು ಅಪರೂಪಕ್ಕೆ ಹವ್ಯಾಸಿ ಮೇಳದ ಯಕ್ಷಗಾನಕ್ಕೆ ಹೋಗುತ್ತಿದ್ದೇನೆ. ಇಲ್ಲಿ ಇಂದಿಗೂ ಯಕ್ಷಗಾನ ಯಕ್ಷಗಾನವಾಗಿಯೇ ಉಳಿದುಕೊಂಡಿದೆ. ಕಾರಣವೆಂದರೆ ನಮ್ಮಲ್ಲಿಯ ವಿದ್ವಾಂಸರು ಕೆಲವರು ವೃತ್ತಿ ಮೇಳದಿಂದ ಹೊರಗೆ ಬಂದು ಹವ್ಯಾಸಿ ಮೇಳವನ್ನು ಕಟ್ಟಿಕೊಂಡಿದ್ದಾರೆ. ಹೀಗಾಗಿ ಯಕ್ಷಗಾನ ವ್ಯಾಪಾರೀಕರಣ ವಾಗಲಿಲ್ಲ. ವ್ಯಾಪಾರೀಕರಣವಾಗದೇ ಇರುವುದರಿಂದ ಕಲಬೆರಕೆಯೂ ಆಗಲಿಲ್ಲ. ಆಗಲೂ ಬಿಡಲಿಲ್ಲ. ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ತಮ್ಮ ಹಿರಿಯ ವಿದ್ವಾಂಸರು ತೋರಿಸಿಕೊಟ್ಟ ಹೆದ್ದಾರಿಯಲ್ಲಿಯೇ ಮುನ್ನಡೆಯುತ್ತಿದ್ದಾರೆ. ಶ್ರೀಮಯ ಕಲಾ ಶಿಕ್ಷಣ ಕೇಂದ್ರವನ್ನು ಕೂಡ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಸಮರ್ಥ ನಟರೂ ಹೌದು. ಅಪ್ರತಿಮ ಸಂಘಟಕರೂ ಹೌದು. ಇನ್ನು ನನ್ನನ್ನು ಈ ಪವಿತ್ರ ವೇದಿಕೆಗೆ ಕರೆದ ಶ್ರೀ ಶಿವಾನಂದ ಹೆಗಡೆ ಇವರನ್ನು ಮತ್ತು ಆಯ್ಕೆ ಸಮಿತಿಯ ಎಲ್ಲರನ್ನೂ ನಾನಿಲ್ಲಿ ಮತ್ತೊಮ್ಮೆ ಗೌರವದಿಂದ ವಂದಿಸಿ ಸ್ಮರಿಸಿ ಶ್ರೀ ಶಿವಾನಂದ ಹೆಗಡೆ ಅವರಿಗೆ ಕಲಾ ಪೋಷಕರಿಂದ ಇನ್ನೂ ಹೆಚ್ಚಿನ ಪ್ರೋತ್ಸಾಹ ಸಹಾಯ - ಸಹಕಾರ ಸಿಗುವಂತಾಗಲೆಂದು ಹಾರೈಸುತ್ತೇನೆ. ಕೊನೆಯದಾಗಿ ಆರೇಳು ಚುಟುಕುಗಳನ್ನು ವಾಚಿಸಿ ನನ್ನ ಈ ಅರಿವಿನ ವ್ಯಾಪ್ತಿಯ ಕಿರು ಮಾತಿಗೆ ತೆರೆ ಎಳೆಯುತ್ತೇನೆ'.

ಯಕ್ಷಾಭಿನಯ

ವಹಿಸಲಿಹ ಪಾತ್ರದ ಯೋಗ್ಯತೆಯ ಅರಿತು
ರಂಗಕ್ಕೆ ಪ್ರವೇಶ ಮಾಡುವುದು ಒಳಿತು
ಕುಣಿತ ಕಲಿತಿಹೆನೆಂದು ಪದಬಿಟ್ಟು ಹಾರಿ
ತಪ್ಪುವುದು ತರವಲ್ಲ ಸಿರಿಕಲೆಯ ದಾರಿ

ಕೆರೆಮನೆಯ ಶಕ್ತಿ

ಕೆರೆಮನೆಯ ಶಕ್ತಿಯೇ ಅವನು ಶಿವರಾಮ
ಅನುಗಾಲ ಸ್ಮರಿಸುವೆನು ನಾನವನ ನಾಮ
ಸರ್ವ ಪಾತ್ರಗಳಲ್ಲಿಯೂ ಅವನಿಲ್ಲಿ ಮಿಂಚಿ
ಮರೆಯಾದ ಯಕ್ಷಕಲೆ ಸ್ವಾರಸ್ಯ ಹಂಚಿ

ಮಹಾಬಲ

ಮಹಾಬಲನು ಅವನಾಗಿ ರಂಗಕ್ಕೆ ಬಂದ
ಯಕ್ಷಗಾನ ಕಲೆಗೇನೆ ಗೌರವವ ತಂದ
ಆ ಭೀಷ್ಮ ಇಂದ್ರಜಿತು ಆ ಅಶ್ವತ್ಥಾಮ
ಎಣಿಸಿದರೆ ಇಂದಿಗೂ ನಿಮುರುವುವು ರೋಮ

ಶಂಭುವಿಗೆ ಇಂಬು

ಹಿರಿಯ ಕಲಾವಿದರ ಮನ ಒಲಿಸಿಕೊಂಡೆ
ಶಲ್ಯನಾಗಿ ನೀನಂದು ರಂಗಕ್ಕೆ ಬಂದೆ
ಮಾತಿನೊಳು ನಾಟ್ಯದೊಳು ರಂಗದೊಳು ಮೆರೆದೆ
ನಟಿಸುತ್ತ ನಟಿಸುತ್ತಲೇ ರಂಗವನು ತೊರೆದೆ

ಗಜಾನನಾ

ರಂಗದೊಳು ನೀನಂದು ಅಂಬೆಯೇ ಆದೆ
ದಾಕ್ಷಾಯಿಣಿಯಾಗಿಯೂ ರಂಗವನ್ನಾಳಿದೆ
ಅಷ್ಟುಬೇಗ ನೀನೇಕೆ ದೂರಕ್ಕೆ ಸರಿದೆ
ಇಲ್ಲಿತ್ತು ನಿನಗೆ ಮನೆ ಅಲ್ಲೆಲ್ಲ ಬರಿದೆ

ಶಿವಾನಂದ

ಅಪ್ರತಿಮ ಸಂಘಟಕ ಇವನು ಶಿವಾನಂದ
ಕೆರೆಮನೆಯ ಕಲೆಯನ್ನು ಬೆಳೆಸುತ್ತ ಬಂದ
ಹಿರಿಯ ಕಲಾವಿದರಂತೆ ನೀ ಕೂಡ ಇಂದೆ
ಬೆಳೆಯುತ್ತ ಬೆಳೆಸುತ್ತ ಹೆಸರನ್ನು ತಂದೆ

ನಿನಗಿದೋ ನಮನ

ಕೆರೆಮನೆಯೆ ನಿನಗಿದೋ ಈ ನನ್ನ ನಮನ
ಸಾರ್ಥಕವು ಭೂಮಿಯಲಿ ಆ ನಿನ್ನ ಜನನ
ಕಲಾಭಿಮಾನಿಗಳ ಮನಗೆದ್ದೆ ನೀನು
ಇದೋ ನಿನಗೆ ಶರಣು ಶರಣೆಂಬೆನು ನಾನು

ಎಲ್ಲರಿಗೂ ನಮಸ್ಕಾರ.

*Page Donated by : **Shri Suhas Gunishastri,** Prabhadevi In the memory of his parents **Late Smt. Rajeshwari & Late Shri P. V. Gunishastri** , Past President, H.W.T.*

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ ವತಿಯಿಂದ ಸಪ್ತ ಕೃತಿಗಳ ಲೋಕಾರ್ಪಣೆ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ಸಾಂತಾಕ್ರೂಜ್ ಕಲಿನಾ ಕ್ಯಾಂಪಸ್‌ನ ಜೆ. ಪಿ. ನಾಯಕ್ ಭವನದಲ್ಲಿ ಏಳು ಕೃತಿಗಳ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಿತ್ತು. ನಗರದ ಹಲವು ಗಣ್ಯರ ಉಪಸ್ಥಿತಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ 58ನೆಯ 'ವಿಚಾರ ಸಾಹಿತ್ಯದ ಅಗತ್ಯ, ಅರ್ಥ ಮತ್ತು ಮೌಲ್ಯ', ಪ್ರಸಿದ್ಧ ಅನುವಾದಕ ಸಾಹಿತಿ ಅರವಿಂದ ಹೆಬ್ಬಾರ್ ಅವರ 'ಕರುಳಿನ ಕರೆ', ಅಂತಾರಾಷ್ಟ್ರೀಯ ಚಿತ್ರಕಲಾವಿದ ದೇವುದಾಸ್ ಶೆಟ್ಟಿ ಅವರ 'ಜೀವನದ ರೇಖೆಗಳು', ರತ್ನಾ ಎಂ. ಎನ್. ಅವರ 'ಚಾರುವಸಂತದ ಆಯಾಮ ಮತ್ತು ಅನನ್ಯತೆ' ಶೈಲಜಾ ಹೆಗಡೆ ಅವರ 'ಕಾಳಿದಾಸನ ಮೇಘದೂತ ಮತ್ತು ಕನ್ನಡ ರೂಪಾಂತರಗಳು', ಶಿವರಾಜ್ ಎಂ. ಜಿ. ಅವರ 'ಕನ್ನಡ ಗಾದೆಗಳ ಅಂತರಂಗ - ಬಹಿರಂಗ' ಹಾಗೂ ಪ್ರಕಾಶ್ ಜಿ. ಬುರ್ಡೆ ಅವರ 'ಸಂಗೀತಯಾನ, ಸಂಗೀತ ಸರಸಿ' ಕೃತಿಗಳನ್ನು ಹಿರಿಯ ಕವಿ ಬಿ. ಎಸ್. ಕುರ್ಕಾಲ್, ಹಿರಿಯ ಸಾಹಿತಿ, ಕವಿ ಡಾ. ಜಿ. ವಿ. ಕುಲಕರ್ಣಿ, ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಇದರ ಅಧ್ಯಕ್ಷ ಚಂದ್ರಶೇಖರ ಪಾಲೆತ್ತಾಡಿ, ಹೆಸರಾಂತ ಕಲಾವಿದ ಸುಬ್ರಾಯ ಭಟ್, ನಟೇಶ್ ಪೊಲೆಪಲ್ಲಿ ಅಹೋರಾತ್ರ, ಡಾ. ಜಿ. ಎನ್. ಉಪಾಧ್ಯ, ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕ ಡಾ. ವಿಶ್ವನಾಥ ಕಾರ್ನಾಡ್ ಇವರುಗಳು ಏಕಕಾಲಕ್ಕೆ ಬಿಡುಗಡೆಗೊಳಿಸಿದರು.

ಕಲೆಯೇ ನನ್ನ ಶ್ರೀಮಂತಿಕೆ, ನನ್ನ ಚಿತ್ರಗಳೇ ನನ್ನ ಸಾಹಿತ್ಯ, ಕಲೆ ನನ್ನ ಜೀವನದ ಪರಿವರ್ತನೆಗೆ ಪೂರಕವಾಗಿದೆಯೆಂದು ಕಲಾವಿದ ದೇವುದಾಸ್ ಶೆಟ್ಟಿಯವರು ತನ್ನ ಸ್ವಂತ ಕೃತಿಯ ಕುರಿತು ಮಾತನಾಡಿದರು. ಹಿರಿಯ ಸಾಹಿತಿ, ಕವಿ ಬಿ. ಎಸ್. ಕುರ್ಕಾಲ್‌ರವರು ಮಾತನಾಡಿ, "ಓರ್ವ ಸರಳ ಸಜ್ಜನಿಕೆಯ ಮಿತಭಾಷಿ ಅರವಿಂದ ಹೆಬ್ಬಾರ್ ಅವರ ಕನ್ನಡದ ಮೇಲಿನ ಅಪಾರವಾದ ಒಲವು ಅವರ ಕೃತಿಯ ಮೂಲಕ ತಿಳಿಯಬಹುದು. ಆಧುನಿಕ ಬರವಣಿಗೆಯ ಜನತೆಗೆ ಇವರೊಬ್ಬ ಆದರ್ಶ ವ್ಯಕ್ತಿ" ಎಂದು ನುಡಿದರು. ಚಂದ್ರಶೇಖರ ಪಾಲೆತ್ತಾಡಿಯವರು ಮಾತನಾಡಿ, "ಗಾದೆಗಳು ವೇದಕ್ಕೆ ಸಮಾನವಾಗಿದ್ದು, 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎನ್ನುವ ಮಾತಿದೆ. ಅಂತಹ ಅರ್ಥಗರ್ಭಿತ ಗಾದೆಗಳ ಬಗ್ಗೆ ಅಧ್ಯಯನ ಸಂಕಲನ ರಚಿಸಿದ ಶಿವರಾಜ್ ಎಂ. ಜಿ. ಅವರ ಸಂಕಲನ ಜನಪರವಾಗಲಿ" ಎಂದು ಆಶಿಸಿದರು.

ಕೃತಿಗಳು ಸಾಹಿತ್ಯಲೋಕವನ್ನು ಬಲಾಢ್ಯಪಡಿಸಬಲ್ಲವು. ಸಾಹಿತ್ಯದಿಂದ ಸಮಾಜದ ತಿಳುವಳಿಕೆ ಸಾಧ್ಯವೆಂಬುದನ್ನು ಹಿರಿಯ ರಂಗಕರ್ಮಿ ಸುಬ್ರಾಯ ಭಟ್ ಅವರು ತಿಳಿಸಿಕೊಟ್ಟರು. 'ಸಂಗೀತ ಸರಸಿ' ವಿಶಿಷ್ಟ ಕೃತಿಯ ಒಳನೋಟವನ್ನು ಸವಿಸ್ತಾರವಾಗಿ ವಿವರಿಸುತ್ತ, ಹಿರಿಯ ಸಂಶೋಧಕಿ ಡಾ. ಲೀಲಾ ಬಿ. ಅವರು ಪ್ರಕಾಶ್ ಜಿ. ಬುರ್ಡೆ ಅವರ ಅಪಾರ ಸಂಗೀತ ಪ್ರೇಮವನ್ನು ಕೊಂಡಾಡಿದರು. ಮೂಲವನ್ನು ಮತ್ತೆ ಓದಬೇಕೆಂಬ ಬಯಕೆಯನ್ನು ಓದುಗರಲ್ಲಿ ಹೆಚ್ಚಿಸುವಲ್ಲಿ ರತ್ನಾರವರು ಯಶಸ್ವಿಯಾದುದನ್ನು 'ಚಾರುವಸಂತದ ಆಯಾಮ ಮತ್ತು ಅನನ್ಯತೆ'ಯನ್ನು ಸಮರ್ಥವಾಗಿ ಪಡಿಮೂಡಿಸುವಲ್ಲಿ ಅವರು ಪಟ್ಟ ಶ್ರಮವನ್ನು ವಿದುಷಿ ಶ್ಯಾಮಲಾ ಪ್ರಕಾಶ್ ಅವರು ತಮ್ಮ ಮೃದು ಮಧುರ ವಚನಗಳಿಂದ ವಿವರಿಸಿದರು. 'ಕಾಳಿದಾಸನ ಮೇಘದೂತ ಮತ್ತು ಕನ್ನಡ ರೂಪಾಂತರಗಳು' ಕೃತಿಯನ್ನು ಬಿಡುಗಡೆಗೊಳಿಸಿದ ನಟೇಶ್ ಪೊಲೆಪಲ್ಲಿ ಅಹೋರಾತ್ರ ಮಾತನಾಡಿ "ಕೃತಿಗಳು ಯಾವತ್ತಿಗೂ ಸ್ವತಂತ್ರ. ಕೃತಿ ಬಿಡುಗಡೆ ಎಂದರೆ ಸಂಕಲನದ ಅನಾವರಣವಲ್ಲ, ಬದಲಾಗಿ ಕೃತಿಯನ್ನು ಓದುಗರಿಗೆ ಒದಗಿಸುವ ಪದ್ಧತಿಯಾಗಿದೆ. ಇಲ್ಲಿ ಕೃತಿಕಾರರು, ಕೃತಿ ಓದುಗರೆಲ್ಲರೂ ಅಭಿನಂದನೆಗೆ ಅರ್ಹರು" ಎಂದು ನುಡಿದರು. ಶೈಲಜಾ ಹೆಗಡೆ ಅವರ ಅಧ್ಯಯನದ ಈ ಕೃತಿಯನ್ನು ಪರಿಚಯಿಸುತ್ತ, ಹಿರಿಯ ಕವಿ, ಸಾಹಿತಿ ಡಾ. ಜೀವಿ ಕುಲಕರ್ಣಿಯವರು "ಮೂಲಕೃತಿ ಕಾಳಿದಾಸನ ಮೇಘದೂತ ಮತ್ತು ಕನ್ನಡದ ಹೆಚ್ಚಿನ ರೂಪಾಂತರ ಕೃತಿಗಳ ವ್ಯಾಪಕ ಅಧ್ಯಯನವನ್ನು ನಡೆಸಿರುವುದರಿಂದ ಇದೊಂದು ಮಹಾಪ್ರಬಂಧದ ಅರ್ಹತೆಯನ್ನು ಪಡೆದುಕೊಂಡಿದೆ. ಹಿಂದಿ ಮತ್ತು ಮರಾಠಿ ಶ್ರೇಷ್ಠ ಕವಿಗಳ ರೂಪಾಂತರ ಕೃತಿಗಳ ಅಧ್ಯಯನವನ್ನೂ ಒಳಗೊಂಡಿರುವುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ" ಎಂದು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

PAGE DONATED BY : ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR***

RNI NO. MAHBIL / 2000 / 746,
Postal R.NO. MCN/161/2015-2017
WPP License No. MR / Tech / WPP-130 / North / 2017
'Licence to post without prepayment'

Posted at Mumbai Patrika Channel Stg. Office Mumbai - 400 001	**Date of Posting :**
Date of Publication : 1st of every month **REGISTERED NEWSPAPER**	**2nd, 3rd of every month**

If undelivered, please return to :
HAVYAKA WELFARE TRUST
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
E-mail : havyakamumbai@hotmail.com
Visit : www.havyakamumbai.com

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

To,

ಕಾರ್ಯಕ್ರಮದಲ್ಲಿ ಸುಗಮ ಸಂಗೀತ ಕಲಾವಿದ ಗಣೇಶ್ ಎರ್ಮಾಳ್ ಜಾದೂಗರ ಸೂರಪ್ಪ ಕುಂದರ್, ಚಿತ್ರಕಲಾವಿದ ಜಯ ಸಿ. ಸಾಲ್ಯಾನ್, ಎಂ. ಫಿಲ್. ಪದವಿ ಪಡೆದ ಉಮಾ ರಾಮರಾವ್ ಮತ್ತು ಖಾಜಪ್ಪ ಮದಾಳಿ ಹಾಗೂ ಅರವಿಂದ ಹೆಬ್ಬಾರ್ ಅವರನ್ನು ಶಾಲು ಹೊದಿಸಿ ಸ್ವರ್ಣ ಪದಕದೊಂದಿಗೆ ಗ್ರಂಥ ಗೌರವವನ್ನು ಸಲ್ಲಿಸಿ ಸನ್ಮಾನಿಸಲಾಯಿತು. ಜ್ಯೋತಿ ಎನ್. ಶೆಟ್ಟಿಯವರು ಪ್ರಾರ್ಥನೆಗೈದರು. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಸ್ವಾಗತಿಸಿ, ಪ್ರಸ್ತಾವನೆ ಗೈದರು. ರಮಾ ಉಡುಪ ಮತ್ತು ಕನ್ನಡ ವಿಭಾಗದ ಸಹಪ್ರಾಧ್ಯಾಪಕಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಶಿವರಾಜ್ ಎಂ. ಜಿ. ವಂದಿಸಿದರು.

ಮುಂಬಯಿಯಲ್ಲಿ ಯುಗಾದಿ ಹಬ್ಬದ ಆಚರಣೆ

ಗುರುಭ್ಯೋ ನಮಃ

28.3.2017ರಂದು ಯುಗಾದಿಯ ಪ್ರಯುಕ್ತ ಸ್ವರ್ಣವಲ್ಲಿ ಸೀಮಾ ಪರಿಷತ್ ಮುಂಬಯಿ ವತಿಯಿಂದ 'ಯುಗಾದಿ ಫಲ ಪಠಣ ಮತ್ತು ಶ್ರವಣ' ಕಾರ್ಯಕ್ರಮ ನಡೆಯಿತು. ಶ್ರೀ ಚಂದ್ರಶೇಖರ ಭಟ್‌ರವರು ಯುಗಾದಿ ಫಲ ಪಠಣ ಮಾಡಿದರು.

ಮೊದಲು ವೇದಘೋಷದಿಂದ ಕಾರ್ಯಕ್ರಮ ಪ್ರಾರಂಭವಾಗಿ ನಂತರ ಗಣಪತಿ ವಂದನೆ ಮತ್ತು ಭಗವದ್ಗೀತೆಯ ಹದಿನಾಲ್ಕನೇ ಅಧ್ಯಾಯವನ್ನು ಮಹಿಳೆಯರು ಸುಶ್ರಾವ್ಯವಾಗಿ ಪಠಿಸಿದರು. ಶ್ರೀ ಶ್ರೀಗಳವರ ಸಂದೇಶವನ್ನು ಪರಿಷತ್ತಿನ ಅಧ್ಯಕ್ಷ ಶ್ರೀ ವಿ. ಎನ್. ಹೆಗಡೆಯವರು ವಾಚಿಸಿದರು. ಇದೇ ಸಂದರ್ಭದಲ್ಲಿ ಪಂಚಾಂಗ ಮತ್ತು ಸರಸ್ವತಿ ಪೂಜೆಯನ್ನು ಕೂಡ ನೆರವೇರಿಸಲಾಯಿತು. ಶ್ರೀ ಸುರೇಶ ಹೆಗಡೆ ಯುಗಾದಿಯ ಮಹತ್ವದ ಬಗ್ಗೆ ತಿಳಿಸಿದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಬೇವು ಬೆಲ್ಲದ ವಿತರಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

– ವಿ. ಎನ್. ಹೆಗಡೆ, ಮುಂಬಯಿ

ACHIEVEMENT

Kalabharati Mr. Pavitra Bhat honoured with the Kala Ratna Award for the service as a young artist in the field of dance in the 40th Cleveland Tyagaraja Festival 2017 in Cleveland Ohio state, USA .

He was presented with a citation and with a prestigious solo recital on 22nd April 2017 in presence of Big names from the field of dance and music.

The Cleveland Tyagaraja Festival is the largest Indian classical music festival outside of India.It was 1st celebrated in 1978 and has now grown to be a 12 day festival with more than 8000 attendees this year it celebrates its 40th year and is awarding the best in the field of music and dance.

We congratulate and wish him all the best in his future.